ಕರ್ನಾಟಕ ಸರ್ಕಾರ

# ನಗರಾಭಿವೃದ್ಧಿ ಇಲಾಖೆ





# ನಗರಾಭಿವೃದ್ಧಿ ನೀತಿ 2009

## ಕರಡು



# ಕರ್ನಾಟಕದ ನಗರಾಭಿವೃದ್ಧಿ ನೀತಿ

## ಕಾರ್ಯಕಾರಿ ಸಾರಾಂಶ

**ಹಿನ್ನಲೆ:**

1. ಕಳೆದ ಕೆಲವು ದಶಕಗಳಲ್ಲಿ ಭಾರತದ ಜನಸಂಖ್ಯೆಯಲ್ಲಿ ಗಮನಾರ್ಹ ಬದಲಾವಣೆ ಉಂಟಾಗಿದೆ. ಬಹುಪಾಲು ಹಳ್ಳಿಗಳೇ ಇರುವಂಥ ಈ ನಾಡಿನಲ್ಲಿ ನಗರೀಕರಣ ತೀವ್ರಗತಿಯಲ್ಲಿ ಆಗುತ್ತಿದೆ ಹಾಗೂ ಈಗ ನಗರಗಳಲ್ಲಿ 300 ದಶಲಕ್ಷಕ್ಕಿಂತಲೂ ಹೆಚ್ಚು ಭಾರತೀಯರು ವಾಸಿಸುತ್ತಿದ್ದಾರೆ. ಈಗಲೂ ವಿಶ್ವದ ಅತಿ ಹೆಚ್ಚು ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರ ಭಾರತ. ಆದರೆ, 2040 ರ ಸುಮಾರಿಗೆ ಇದು ವಿಶ್ವದ ಅತಿ ಹೆಚ್ಚು ನಗರದ ಜನಸಂಖ್ಯೆಯುಳ್ಳ ರಾಷ್ಟ್ರವಾಗಲಿದೆ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಆಗಿರುವ ಗಣನೀಯ ಬೆಳವಣಿಗೆಯೇ ಮೊದಲ್ಗೊಂಡು ಕರ್ನಾಟಕವು ರಾಷ್ಟ್ರದಲ್ಲಿ ಆಗುತ್ತಿರುವ ಬದಲಾವಣೆಗೆ ಸರಿಸುಮಾರು ಸಮನಾದ ಬದಲಾವಣೆಯನ್ನು ಹೊಂದುತ್ತಿದೆ. 1991–2001 ರಲ್ಲಿ ಗ್ರಾಮೀಣ ಪ್ರದೇಶಗಳಿಗಿಂತಲೂ 2.5ರಷ್ಟು ಹೆಚ್ಚು ವೇಗದ ಗತಿಯಲ್ಲಿ ಕರ್ನಾಟಕದ ನಗರ ಪ್ರದೇಶಗಳು ಹೆಚ್ಚು ಬೆಳೆದಿವೆ. ಹೀಗಾಗಿ ಕರ್ನಾಟಕದ ಭವಿಷ್ಯ ಹೆಚ್ಚಾಗಿ ನಗರಗಳ ಆರ್ಥಿಕ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ಅವಲಂಬಿಸುತ್ತಿದೆ.

2. ರಾಜ್ಯದ ಈ ತೀವ್ರಗತಿಯ ನಗರೀಕರಣದಿಂದ ಬಹಳಷ್ಟು ಸವಾಲುಗಳು ಉದ್ಭವಿಸಿವೆ. ರಾಜಕೀಯ ಶಕ್ತಿ ಹಳ್ಳಿಗಳಿಂದ ದೂರವಾಗಿ ಪುನರ್ವಿಂಗಡಿತವಾಗುತ್ತಿರುವುದು, ಜನರು ಬಹುಸಂಖ್ಯಾತವಾಗಿ ನಗರಗಳಿಗೆ ವಲಸೆ ಬರುತ್ತಿರುವುದು, (ಬೇರೆ ರಾಜ್ಯಗಳಿಂದಲೂ ಸೇರಿದಂತೆ) ಹೊಸ ಆರ್ಥಿಕ ವ್ಯವಸ್ಥೆಯ ಬದಲಾಗುತ್ತಿರುವ ಸ್ವರೂಪ, ಪರಿಸರ ಹಾಗೂ ಪುರಾತನ ನಗರಗಳ ಸ್ವರೂಪಕ್ಕೆ ಧಕ್ಕೆ ಒದಗುತ್ತಿರುವುದು ಈ ಎಲ್ಲಾ ಸಮಸ್ಯೆಗಳನ್ನು ನಾವು ಹಿಡಿತಕ್ಕೆ ತಂದು ನ್ಯಾಯಯುತವಾಗಿ ಮತ್ತು ಊರ್ಜಿತವಾಗುತ್ತಿರುವ ರೀತಿಯಲ್ಲಿ ಪರಿಹರಿಸಬೇಕಾಗಿದೆ. ಶಾಸನ ರಚನೆ ಮೂಲಕ (ಪ್ರಮುಖವಾಗಿ ಸಂವಿಧಾನದ 74ನೇ ತಿದ್ದುಪಡಿ ಹಾಗೂ ಅದರ ಅನೇಕ ಅನುಸೂಚಿಗಳು ಮತ್ತು ತೀರಾ ಇತ್ತೀಚೆಗೆ ಜವಹಾರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವನಿರ್ಮಾಣ ಅಭಿಯಾನ) ಹಾಗೂ ಆಡಳಿತದ ಮೂಲಕ ಕೇಂದ್ರ ಹಾಗೂ ರಾಜ್ಯಮಟ್ಟದಲ್ಲಿ ಈ ಸವಾಲುಗಳನ್ನು ಎದುರಿಸಲು ಕೆಲವೊಂದು ಪ್ರಯತ್ನಗಳನ್ನು ಮಾಡಿದ್ದರೂ, ಮಾಡಬೇಕಾದದ್ದು ಇನ್ನೂ ಬಹಳಷ್ಟಿದೆ.

ಈ ಹಿನ್ನಲೆಯಲ್ಲಿ 2008ರ ಡಿಸೆಂಬರ್ 31 ರಂದು ಕರ್ನಾಟಕ ಸರ್ಕಾರವು ನಗರಾಡಳಿತ ಕುರಿತ ವಿವಿಧ ಅಂಶಗಳನ್ನು ಪರಿಶೀಲಿಸಿ ರಾಜ್ಯಕ್ಕೆ ಒಂದು ನಗರಾಭಿವೃದ್ಧಿ ನೀತಿಯನ್ನು ತಯಾರಿಸಲು ಒಂದು ಸಮಿತಿಯನ್ನು ಸ್ಥಾಪಿಸಿದೆ. ಈ ಸಮಿತಿಗೆ ವಿಶೇಷವಾಗಿ ನಗರ ಸ್ಥಳೀಯ ಸಂಸ್ಥೆಗಳು ಆಡಳಿತವನ್ನು ವಿಕೇಂದ್ರೀಕರಣಗೊಳಿಸಬೇಕೆಂದು ಸಂವಿಧಾನದಲ್ಲಿ ಕರೆ ನೀಡಿರುವ ಹಿನ್ನಲೆಯಲ್ಲಿ ಮತ್ತು ತತ್ಪರಿಣಾಮವಾಗಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಆಡಳಿತವನ್ನು ತಾವೇ ನಿರ್ವಹಿಸುವುದಕ್ಕಾಗಿ ಸಾಕಷ್ಟು ಆಡಳಿತಾತ್ಮಕ, ಆರ್ಥಿಕ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಹೊಂದಿರುವಂತೆ ನೋಡಿಕೊಳ್ಳುವುದಕ್ಕಾಗಿ ಕರ್ನಾಟಕದ ನಗರ ಪ್ರದೇಶಗಳಿಗಾಗಿ ಹೊಸದೊಂದು ಮಾರ್ಗವನ್ನು ರೂಪಿಸುವ ಕಾರ್ಯವನ್ನು ವಹಿಸಲಾಗಿದೆ.

ಪ್ರಾರಂಭದಲ್ಲೇ ನಗರೀಕರಣದ ಬಗ್ಗೆ ಒಂದು ಸಕಾರಾತ್ಮಕ ಧೋರಣೆಯನ್ನು ತಾಳುವುದು ಒಳ್ಳೆಯದು. ಈ ಹಿಂದೆ ನಗರೀಕರಣ ಎಂದರೆ, ಅದೊಂದು ಸಮಸ್ಯೆ ಎಂಬಂತೆ ನೋಡಲಾಗುತ್ತಿತ್ತು. ಈ ಭಾವನೆಯನ್ನು ತೊಡೆದು ಹಾಕುವುದಕ್ಕಾಗಿ ನಗರೀಕರಣ ಎನ್ನುವುದು ಒಂದು ಸ್ವಾಗತಾರ್ಹ ಬದಲಾವಣೆ ಎಂದು ಅಂಗೀಕರಿಸುವುದು ಮತ್ತು ಅದು ರಾಜ್ಯದ ಮಿಲಿಯಾಂತರ ಜನತೆಯ ಅಭೀಪ್ಸೆಯನ್ನು ಬಿಂಬಿಸುತ್ತದೆ ಎಂಬುದನ್ನು ಅಂಗೀಕರಿಸುವುದು ಮುಖ್ಯ ಹಾಗೂ ನಗರೀಕರಣವನ್ನು ನಮ್ಮ ಅಪೇಕ್ಷಣೀಯವಾದ ಗುರಿಗಳ ಕಡೆಗೆ ಸರಿಯಾಗಿ ತಿರುಗಿಸಿ ಸಾಗಿಸುವುದು ಅವಶ್ಯ.

**ಸವಾಲುಗಳು**

ರಾಜ್ಯದ ನಗರೀಕರಣದ ಸವಾಲುಗಳನ್ನು ವಿವಿಧ ದೃಷ್ಟಿಕೋನಗಳಿಂದ ಗ್ರಹಿಸಬಹುದಾಗಿದೆ – ನಗರ ಪ್ರದೇಶಗಳ ಪ್ರಾದೇಶಿಕ ವಿತರಣೆ ಮತ್ತು ಅವುಗಳಲ್ಲಿ ಒಡಮೂಡುತ್ತಿರುವ ಜನಸಂಖ್ಯಾ ಪ್ರವೃತ್ತಿಗಳು ಕೆಲವಾರು ರಂಗಗಳಲ್ಲಿ ಮೂಲಸೌಕರ್ಯದ ಕೊರತೆ, ನಗರ ಪ್ರದೇಶಗಳ ಬಡವರಿಗೆ ಮೂಲಭೂತ ಕ್ಷೇಮಾಭಿವೃದ್ಧಿ ದೊರಕುವಂತೆ ನೋಡಿಕೊಳ್ಳುವ ಸವಾಲು ಮತ್ತು ಆಡಳಿತ ವ್ಯವಸ್ಥೆ, ಯೋಜನಾ ರಚನೆ ಮತ್ತು ಆಡಳಿತವನ್ನು ಬಲಪಡಿಸಬೇಕಾದ ಅಗತ್ಯ ಇವೇ ಮುಂತಾದವು.

1. <u>ಪ್ರಾದೇಶಿಕ ವಿತರಣೆ:</u> ಕಳೆದ ಎರಡು ದಶಕಗಳಲ್ಲಿ ರಾಜ್ಯದಲ್ಲಿ ಬೆಂಗಳೂರಿನ ಗಾತ್ರ ಮತ್ತು ಆರ್ಥಿಕ ಪಾತ್ರ ಅಳತೆ ಮೀರಿ ಬೃಹತ್ತಾಗಿ ಬೆಳೆಯುತ್ತಿದೆ. ಇದು ಒಂದು ಸ್ವಯಂ ಪರಿಪೂರ್ಣ ವರ್ತುಲವನ್ನು ಸೃಷ್ಟಿಸಿ ಇದರಿಂದಾಗಿ ಇನ್ನೂ ಹೆಚ್ಚು ಹೆಚ್ಚು ಹೊಸ ಬಂಡವಾಳ ಹೂಡಿಕೆಗಳು ಮತ್ತು ವಲಸೆಗಾರರು ಬೆಂಗಳೂರು ಮಹಾನಗರ ಪ್ರದೇಶಕ್ಕೆ ಆಕರ್ಷಿತರಾಗಿ ಬರುತ್ತಿದ್ದಾರೆ. ರಾಜ್ಯದಲ್ಲಿ 2ನೇ ದೊಡ್ಡ ನಗರ ಸಮುಚ್ಚಯವಾಗಿರುವ ಹುಬ್ಬಳ್ಳಿ–ಧಾರವಾಡ ಸಹ ಇದರ

ಮುಂದೆ ಬಹಳ ಚಿಕ್ಕದ್ದು. ಅದರ ಜನಸಂಖ್ಯೆ ಬೆಂಗಳೂರಿನ ಕೇವಲ 1/6ನೇ ಭಾಗದಷ್ಟಿದೆ. ಆದ್ದರಿಂದ ಭವಿಷ್ಯವನ್ನು ಕುರಿತು ರಚಿಸುವ ಯಾವುದೇ ಯೋಜನೆಯಲ್ಲಿ ಈ ಅಸಮತೋಲನವನ್ನು ಸರಿಪಡಿಸಬೇಕು. ಆದರೆ, ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಬೆಂಗಳೂರಿನ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಅದರ ಹಿತಾಸಕ್ತಿಗಳನ್ನು ಬಲಿಕೊಡದಂತೆ ಬಹಳ ಎಚ್ಚರಿಕೆಯಿಂದ ಈ ಕಾರ್ಯವನ್ನು ಮಾಡಬೇಕಾಗಿದೆ.

2. <u>ಬಡವರ ಕ್ಷೇಮಾಭಿವೃದ್ಧಿ:</u> ನಗರಗಳಿಗೆ ಬಹುಸಂಖ್ಯಾತ ಜನರು ವಲಸೆ ಬರುವ ಜೊತೆಜೊತೆಗೆ ಒಂದು ದುರ್ದೈವಿ ಪ್ರವೃತ್ತಿ ಕೂಡ ಬರುತ್ತಿದೆ. ಇಂದು ಕರ್ನಾಟಕದಲ್ಲಿ ನಗರ ಬಡತನದ ದರವು ಗ್ರಾಮೀಣ ಪ್ರದೇಶಗಳಿಗಿಂತಲೂ ಬಹಳ ಹೆಚ್ಚಾಗಿದೆ – ವಿಷಾದದ ಸಂಗತಿ ಏನೆಂದರೆ, ಇತರ ಅನೇಕ ರಾಜ್ಯಗಳಿಗಿಂತಲೂ ಮತ್ತು ಅಖಿಲ ಭಾರತ ಸರಾಸರಿಗಿಂತಲೂ ಕರ್ನಾಟಕದ ನಗರ ಬಡತನದ ದರವು ಹೆಚ್ಚಿನದಾಗಿದೆ. ನಗರದ ಜನತೆಯ ಅಲ್ಪ ಭಾಗ ಮಾತ್ರ ಸ್ಲಂಗಳಲ್ಲಿ ವಾಸಿಸುತ್ತಿದ್ದರೂ ಬಡ ಕುಟುಂಬಗಳ ಮಾಸಿಕ ತಲಾವಾರು ವೆಚ್ಚವು ಕರ್ನಾಟಕದಲ್ಲಿ ಅನೇಕ ಇತರ ದೊಡ್ಡ ರಾಜ್ಯಗಳಿಗಿಂತಲೂ ಕಡಿಮೆಯಾಗಿದೆ. ಆದ್ದರಿಂದ, ನಗರದ ಬಡಜನತೆಯ ಕ್ಷೇಮಾಭಿವೃದ್ಧಿಯನ್ನು ಇನ್ನೂ ಚೆನ್ನಾಗಿ ಸಾಧಿಸಬಲ್ಲ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು ಅತ್ಯಂತ ಅಗತ್ಯವಾಗಿ ಮಾಡಬೇಕಾದ ಕಾರ್ಯ. ಇದರಲ್ಲೂ ವಿಶೇಷವಾಗಿ ಆತಂಕಕಾರಿಯಾದ ವಿಷಯಗಳೆಂದರೆ ಬಡಜನತೆಗೆ ಸಾಕಷ್ಟು ವಸತಿ ಒದಗಿಸುವುದರಲ್ಲಿ, ಅವರ ನೈರ್ಮಲ್ಯ ಪರಿಸ್ಥಿತಿ, ವಿದ್ಯಾಭ್ಯಾಸ ಮತ್ತು ಉದ್ಯೋಗವಕಾಶಗಳಲ್ಲಿ ಇರುವ ಕೊರತೆ. ಈ ಸವಾಲನ್ನು ಇನ್ನಷ್ಟು ಕ್ಲಿಷ್ಟಕರವನ್ನಾಗಿ ಮಾಡಿರುವ ಸಂಗತಿ ಎಂದರೆ ಏಕೈಕ ಸಂಸ್ಥೆಯೊಂದು ಕೆಲಸ ಮಾಡದೆ ಬಡಜನತೆಯ ಸಮಸ್ಯೆಗಳನ್ನು ವಿವಿಧ ಸರ್ಕಾರಿ ಇಲಾಖೆಗಳು ಬಿಡಿಬಿಡಿಯಾಗಿ ಕಾರ್ಯನಿರ್ವಹಿಸುತ್ತಾ ಪರಿಹರಿಸಲು ಪ್ರಯತ್ನಿಸುತ್ತಿರುವುದು.

3. <u>ಮೂಲಸೌಕರ್ಯಗಳ ಕೊರತೆ:</u> ದಿನೇದಿನೇ ಹೆಚ್ಚುತ್ತಿರುವ ನಗರಗಳ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ರಾಜ್ಯವು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಎಷ್ಟೇ ಪ್ರಯತ್ನ ಮಾಡಿದರೂ ಆ ಪ್ರಯತ್ನಗಳನ್ನು ಮೀರಿಸಿ ನಗರಪ್ರದೇಶಗಳು ಬೆಳೆಯುತ್ತಿವೆ. ರಸ್ತೆಗಳು ಮತ್ತು ಸಾರಿಗೆ (ನಗರಗಳ ಒಳಗೆ ಮತ್ತು ರಾಜ್ಯಗಳ ವಿವಿಧ ಮತ್ತು ಪ್ರಮುಖ ನಗರಗಳ ನಡುವೆ) ಗೃಹ ನಿರ್ಮಾಣ, ಕುಡಿಯುವ ನೀರಿನ ಸರಬರಾಜು, ಗೃಹಗಳ ನೈರ್ಮಲ್ಯ ವ್ಯವಸ್ಥೆ, ಗ್ರಾಮಸಾರ ಸಂಸ್ಕರಣಾ ವ್ಯವಸ್ಥೆಗಳು, ಘನತ್ಯಾಜ್ಯ ಸಂಗ್ರಹಣೆ ಮತ್ತು ನಿರ್ವಹಣೆ, ಮಳೆ ನೀರಿನ ಚರಂಡಿಗಳು, ನಗರ ಪ್ರದೇಶದ ಕೆರೆಗಳು ಮತ್ತು ಗೃಹ ಬಳಕೆ ಇಂಧನ – ಇಂಥ ಅನೇಕ

ಪ್ರಮುಖ ರಂಗಗಳಲ್ಲಿ ಇಂದು ಮೂಲಸೌಕರ್ಯವು ಗಣನೀಯವಾಗಿ ಕೊರತೆಯಾಗಿದೆ. ಈ ಎಲ್ಲಾ ಪ್ರಕರಣಗಳಲ್ಲಿ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ ಅಗಾಧವಾಗಿದ್ದು ಲಕ್ಷಾಂತರ ಕುಟುಂಬಗಳ ಮೇಲೆ ಪರಿಣಾಮ ಬೀರಿದೆ ಹಾಗೂ ನಗರ ಪ್ರದೇಶಗಳಲ್ಲಿ ಅನೇಕ ಕ್ಷೇತ್ರಗಳಲ್ಲಿ ಜೀವನ ಶೈಲಿಗೆ ಧಕ್ಕೆ ಉಂಟಾಗಿದೆ.

4. <u>ಸಂಪನ್ಮೂಲಗಳು:</u> ಮೂಲಸೌಕರ್ಯಗಳ ಬೇಡಿಕೆ ಬೆಳೆಯುತ್ತಾ ಹೋದಂತೆ ಹೊಸ ಬಂಡವಾಳಗಳನ್ನು ಹೂಡಲು ಮತ್ತು ರಚಿಸಿದ ಸ್ವತ್ತುಗಳನ್ನು ಸಾಕಷ್ಟು ಚೆನ್ನಾಗಿ ನಿರ್ವಹಿಸಿಕೊಂಡು ಬರಲು ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗಿದೆ. ನಿರ್ಮಾಣದ ಗುಣಮಟ್ಟ ಮತ್ತು ವಿನ್ಯಾಸದಲ್ಲಿ ಅತ್ಯುನ್ನತ ಗುಣಮಟ್ಟಗಳು ಇರುವಂತೆ ನೋಡಿಕೊಳ್ಳುವುದು ಬಹಳ ಮುಖ್ಯವಾಗಿದೆ.

5. <u>ಆಡಳಿತ ನಿರ್ವಹಣಾ ಸಮಸ್ಯೆಗಳು:</u> ದೂರದೃಷ್ಟಿಯಿಂದ ಮತ್ತು ಪ್ರಜಾವರ್ಗವನ್ನು ಸಶಕ್ತಪಡಿಸುವ ಉದ್ದೇಶದಿಂದ ಮಾಡಲಾದ ಸಂವಿಧಾನದ 74ನೇ ತಿದ್ದುಪಡಿಯ ಉಪಬಂಧಗಳನ್ನು ಕರ್ನಾಟಕದಲ್ಲಿ ಪೂರ್ಣವಾಗಿ ಅಳವಡಿಸಿಕೊಂಡಿಲ್ಲ. ಇದರ ಪರಿಣಾಮವಾಗಿ ನಗರ ಸ್ಥಳೀಯ ಮಂಡಳಿಗಳು ಎರಡು ರೀತಿಯ ಕೊರತೆಯನ್ನು ಅನುಭವಿಸುತ್ತಿವೆ. ಒಂದು – ಅವುಗಳಿಗೆ ಅಗತ್ಯವಾದ ಆರ್ಥಿಕ ಬಲವಿರುವುದಿಲ್ಲ ಅಥವಾ ಮುನಿಸಿಪಲ್ ಆಡಳಿತ ನಡೆಸಲು ಬೇಕಾದ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಅವಶ್ಯ ಸ್ವಾಯತ್ತತೆ ಇರುವುದಿಲ್ಲ. ಆದ್ದರಿಂದ ಅವರು ತಮ್ಮ ವಿವಿಧ ಕಾರ್ಯಕ್ರಮಗಳಿಗೆ ರಾಜ್ಯ ಮಟ್ಟದ ಹಣ ನೀಡಿಕೆಯನ್ನು ಅವಲಂಬಿಸಬೇಕಾಗುತ್ತದೆ. ಎರಡನೆಯದಾಗಿ ಸಂವಿಧಾನದಡಿಯಲ್ಲಿ ಅವರಿಗೆ ಕೊಡಲಾದ ವಿವಿಧ ಜವಾಬ್ದಾರಿಗಳಲ್ಲಿ ಕೆಲವು ವಿಷಯಗಳನ್ನು ಮಾತ್ರ ರಾಜ್ಯವು ಅವರಿಗೆ ವಹಿಸಿದೆ ಮತ್ತು ನಗರ ಪ್ರದೇಶದ ಆಡಳಿತದಲ್ಲಿ ನಾಗರಿಕರ ಭಾಗವಹಿಸುವಿಕೆ ಎಂಬುದು ಪೂರೈಸದೆ ಇರುವ ಒಂದು ಭರವಸೆಯಾಗಿದೆ. (ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಸ್ಥಳೀಯ ಸಂಸ್ಥೆಗೆ ಬಹಳಷ್ಟು ಅಧಿಕಾರಗಳನ್ನು ಒದಗಿಸಿವೆ.)

## ಸರ್ಕಾರದ ಪ್ರಯತ್ನಗಳು

ಇತ್ತೀಚಿನವರೆಗೂ ಅಭಿವೃದ್ಧಿಗಾಗಿ ಹಣ ನೀಡುವಾಗ ಮತ್ತು ಸರ್ಕಾರದ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳನ್ನೇ ಕೇಂದ್ರಿಕರಿಸಲಾಗುತ್ತಿತ್ತು. ಆದರೆ ನಗರ ಪ್ರದೇಶಗಳಲ್ಲಿ ತೀವ್ರಗತಿಯಲ್ಲಿ ಆಗುತ್ತಿರುವ ಬದಲಾವಣೆಯ ಕಾರಣದಿಂದಾಗಿ ಅಭಿವೃದ್ಧಿಯಲ್ಲಿ ಆಗಿರುವ ಕೊರತೆಯನ್ನು ತುಂಬಲು ಬಹಳ ತಡವಾಗಿ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಸರ್ಕಾರದ ಕಾರ್ಯಕ್ರಮಗಳು ಈ ಮುಂದಿನ ಸ್ವರೂಪದಲ್ಲಿವೆ:– ಅ) ನಗರ ಪ್ರದೇಶಗಳಿಗೆ ಹೆಚ್ಚಿನ ಹಣಕಾಸು ಹಂಚಿಕೆ; ಆ) ಸಂವಿಧಾನ ತಿದ್ದುಪಡಿ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ 18 ಆಡಳಿತಾತ್ಮಕ ಕೆಲಸಕಾರ್ಯಗಳನ್ನು ವಹಿಸಿಕೊಡುವುದು ಇ) ಮಹಾನಗರಗಳಲ್ಲಿ ಮಹಾನಗರ ಯೋಜನಾ ಸಮಿತಿಗಳನ್ನು ಸ್ಥಾಪಿಸುವುದು ಹಾಗೂ ಇತರ ಪ್ರದೇಶಗಳಲ್ಲಿ ಜಿಲ್ಲಾ ಯೋಜನಾ ಪ್ರಾಧಿಕಾರಗಳನ್ನು ನಿರ್ಮಿಸುವುದು ಈ) ದೊಡ್ಡ ನಗರಗಳಿಗೆ ಪರ್ಯಾಯವಾಗಿ ಸಣ್ಣ ಪಟ್ಟಣಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನ ಮತ್ತು ಉ) ವಿಶೇಷವಾಗಿ ಬಡ ಜನತೆಗಾಗಿ ನಗರ ಉದ್ಯೋಗ ನೆರವು.

ಈ ಯೋಜನೆಗಳು ಹೆಚ್ಚೆಂದರೆ ಮಿಶ್ರ ಮತ್ತು ಸೀಮಿತ ಫಲಿತಾಂಶಗಳನ್ನು ನೀಡಿವೆ. ಈ ಹಿನ್ನಲೆಯಲ್ಲಿ ನಗರಾಡಳಿತ ಮತ್ತು ಮೂಲಸೌಕರ್ಯಾಭಿವೃದ್ಧಿಗೆ ಹೊಸತೊಂದು ವೇಗವನ್ನು ನೀಡುವ ಉದ್ದೇಶದಿಂದ ಕೇಂದ್ರಸರ್ಕಾರವು ಕೇಂದ್ರ ಮತ್ತು ರಾಜ್ಯಗಳು ಸಂಯುಕ್ತವಾಗಿ ಹಣಕಾಸು ನೀಡುವ ಒಂದು ಅಭಿಯಾನವಾಗಿ ***ಜವಹರಲಾಲ್ ನೆಹರೂ ನಗರ ನವನಿರ್ಮಾಣ ಅಭಿಯಾನ***ವನ್ನು ಪ್ರಾರಂಭಿಸಿದೆ. ಈ ಕಾರ್ಯಕ್ರಮದಡಿಯಲ್ಲಿ ಅಭಿವೃದ್ಧಿ ಯೋಜನೆ ಮತ್ತು ಅದರ ಆಡಳಿತವನ್ನು ನಿರ್ವಹಿಸುವ ಹಾಗೂ ನಗರ ಆಡಳಿತದ ಸುಧಾರಣೆಯನ್ನು ಮಾಡುವ ಅಧಿಕಾರವನ್ನು ವಹಿಸಿಕೊಟ್ಟಾಗ ಮಾತ್ರ ಹಣವನ್ನು ಬಿಡುಗಡೆ ಮಾಡುವಂತೆ ವಿಧಿಸಿ ಯೋಜಿಸಲಾಗಿದೆ. ಈ ಅಭಿಯಾನವು ನಗರ ಪ್ರದೇಶಗಳ ಪುನರುಜ್ಜೀವನಕ್ಕೆ ದೊರೆಯತಕ್ಕ ಸಂಪನ್ಮೂಲಗಳನ್ನು ಹೆಚ್ಚಿಸುವುದರ ಜೊತೆಗೆ ಬೃಹತ್ ನಗರಗಳನ್ನು ತನ್ನ ಕೇಂದ್ರ ವಿಷಯವಾಗಿ ಇರಿಸಿಕೊಂಡಿದೆ. UIDSSMT ಸಣ್ಣ ಮತ್ತು ಮಧ್ಯಮ ಪಟ್ಟಣಗಳಿಗೆ ನೆರವನ್ನು ನೀಡುತ್ತದೆ. ಆದರೆ ಅಸಂಖ್ಯಾತ ಸಣ್ಣ ಪಟ್ಟಣಗಳು ಮತ್ತು ನಗರಗಳ ಸಮಸ್ಯೆಗಳನ್ನು ಪರಿಹರಿಸುವ ಭಾರ ಬಹುಪಾಲು ರಾಜ್ಯಗಳ ಮೇಲೇ ಬಿದ್ದಿದೆ.

ಇದುವರೆಗೆ ತೆಗೆದುಕೊಂಡ ಕಾರ್ಯಕ್ರಮಗಳು ಕೆಲವು ಪ್ರಾಜೆಕ್ಟ್‌ಗಳಿಗೆ ಹೊರನೆರವು ಪಡೆದು ಹೆಚ್ಚುವರಿ ಬೆಂಬಲ ಒದಗಿಸಿವೆ. ಇವು ನಗರಗಳ ಮೂಲಸೌಕರ್ಯಗಳನ್ನು ಸುಧಾರಿಸಿವೆ. ಆದರೆ ಬೇಡಿಕೆ ಮತ್ತು ಪೂರೈಕೆ ನಡುವೆ ಇನ್ನೂ ಗಣನೀಯ ಅಂತರ ಇದೆ. ಭೂ ಬಳಕೆ ಮಾಹಿತಿಯ ಕಳಪೆ

ಗುಣಮಟ್ಟ, ಸರ್ಕಾರಿ ಇಲಾಖೆಗಳ ಒಳಗೆ ಯೋಜನೆ ಮಾಡುವ ಸಾಮರ್ಥ್ಯದ ಕೊರತೆ, ವಿವಿಧ ಯೋಜನಾ ಏಜೆನ್ಸಿಗಳ ಕಾರಣದಿಂದಾಗಿ ಪ್ರದೇಶಗಳ ನಡುವೆ ಸಮನ್ವಯವಿಲ್ಲದಿರುವುದು – ಇವುಗಳ ಕಾರಣದಿಂದ ಯೋಜನಾಭಿಮುಖ ಕಾರ್ಯಕ್ರಮಗಳು ಸಹ ಭಾಗಶಃ ಯಶಸ್ವಿಯಾಗಿವೆ. ಇವೆಲ್ಲದರ ನಡುವೆ ಖಾಸಗಿ ವಲಯದಲ್ಲಿ ಆಗುತ್ತಿರುವ ಕೈಗಾರಿಕಾ ಅಭಿವೃದ್ಧಿಯು ಈಗಿರುವ ಸಮಸ್ಯೆಗಳ ಮೇಲೆ ನಿರಂತರವಾಗಿ ಒತ್ತಡವನ್ನು ಹೇರುತ್ತಿದೆ.

**ನಗರಾಭಿವೃದ್ಧಿ ಕಾರ್ಯನೀತಿ**

ಈ ಎಲ್ಲಾ ಅಂಶಗಳಿಂದ ಯಾವುದೇ ಪ್ರಯತ್ನವನ್ನು ಅಲ್ಲೊಂದಿಷ್ಟು – ಇಲ್ಲೊಂದಿಷ್ಟು ಎಂದು ಮಾಡುವುದರಿಂದ ಕರ್ನಾಟಕದ ನಗರಪ್ರದೇಶದ ಬೆಳವಣಿಗೆ ಸಾಧ್ಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದು ರಾಜ್ಯ ಸರ್ಕಾರವು ನಗರ ಬೆಳವಣಿಗೆಯ ಒಂದು ಪರಿಪೂರ್ಣ ದೃಷ್ಟಿಯನ್ನು ತೆಗೆದುಕೊಳ್ಳಲು ಕಾರ್ಯನೀತಿ ಚಾಲಿತ ವಿಧಾನವನ್ನು ಅನುಸರಿಸಲು ಮತ್ತು ಭವಿಷ್ಯಕ್ಕಾಗಿ ಸೂಕ್ತ ಕ್ರಮಗಳನ್ನು ಸಲಹೆ ಮಾಡಲು ನಿರ್ಧರಿಸಿದೆ. ಈ ಕ್ರಮವನ್ನು ಅನುಸರಿಸಿದಾಗ ಅದು ನಗರಗಳು ಮತ್ತು ಪಟ್ಟಣಗಳ ಆರ್ಥಿಕ ಉತ್ಪಾದಕತೆಯನ್ನು ಸುಧಾರಿಸಲು, ಅದರ ಬೆಳವಣಿಗೆ ಕಾರ್ಯಕ್ರಮದಲ್ಲಿ ಎಲ್ಲಾ ಆರ್ಥಿಕ ವರ್ಗದವರು ಒಳಗೊಳ್ಳುವಂತೆ ನೋಡಿಕೊಳ್ಳುತ್ತದೆಯೆಂದು ಪರಿಸರ ದೃಷ್ಟಿಯಿಂದ ಊರ್ಜಿತವಾಗುವ ಆಯ್ದ ಅಂಶಗಳನ್ನು ಉತ್ತೇಜಿಸುತ್ತದೆಂದು, ನಾಗರಿಕರ ಅಗತ್ಯತೆಗಳಿಗೆ ತನ್ನ ಗಮನ ನೀಡಿ ಅವುಗಳಿಗೆ ಸ್ಪಂದಿಸುವಂತೆ ಅವರನ್ನು ಸಾಕಷ್ಟು ಸಶಕ್ತಗೊಳಿಸುವ ಶಕ್ತಿಯುತವಾದ ಸ್ಥಳೀಯ ಸರ್ಕಾರಗಳು ಬೆಳೆಯುವಂತೆ ನೋಡಿಕೊಳ್ಳುತ್ತದೆ ಎಂದು ಆಶಿಸಲಾಗಿದೆ.

ಪರಿಗಣಿಸಬೇಕಾದ ವಿವಿಧ ಅಂಶಗಳ ಬಗ್ಗೆ ಚರ್ಚೆ ನಡೆಸಲು ಮತ್ತು ಪರ್ಯಾಲೋಚಿಸಲು ಸಮಿತಿಯು ಕಾರ್ಯನೀತಿ ಚೌಕಟ್ಟಿನ 7 ಪ್ರಮುಖ ಅಂಗ ಭಾಗಗಳನ್ನು ಮುಂದಿರಿಸಿದೆ:

1. **ನಗರಾಭಿವೃದ್ಧಿಗೆ ಒಂದು ಕಾರ್ಯತಂತ್ರ:**

ಇಲ್ಲಿಯವರೆಗೆ ನಗರಗಳ ಅಭಿವೃದ್ಧಿಯನ್ನು ಅದು ಒಟ್ಟಾರೆ ರಾಜ್ಯದ ವಿಶಾಲ ದೃಷ್ಟಿ ಕೋನದೊಳಗೆ ಹೇಗೆ ಅಡಕವಾಗುತ್ತದೆ ಎಂಬ ಸ್ಪಷ್ಟ ಚಿತ್ರವಿಲ್ಲದೆ ಮತ್ತು ರಾಜ್ಯದಲ್ಲಿನ ವಿವಿಧ ನಗರಗಳಿಗೆ ಮತ್ತು ಪ್ರದೇಶಗಳಿಗೆ ಯಾವ ನಿರ್ದಿಷ್ಟ ಶಕ್ತಿಗಳನ್ನು ಅಭಿವೃದ್ಧಿ ಪಡಿಸಬೇಕು ಎಂಬ ಅರಿವುವಿಲ್ಲದೆ ಮಾಡಲಾಗಿದೆ. ವಿವಿಧ ಕಾರ್ಯನೀತಿಗಳನ್ನು, ಉದಾಹರಣೆಗೆ ರಾಜ್ಯದ ಕೈಗಾರಿಕಾ ಅಭಿವೃದ್ಧಿ ಕಾರ್ಯನೀತಿ, ಮೂಲಸೌಕರ್ಯಗಳ ಕಾರ್ಯನೀತಿ ಅಥವಾ ನಿರ್ದಿಷ್ಟ ಕೈಗಾರಿಕೆಗಳಿಗೆ ವಲಯವಾರು ಕಾರ್ಯನೀತಿಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ರೂಪಿಸಿದರೆ ಇದು ಅಷ್ಟಾವಕ್ರತೆಗೆ ಎಡೆ

ಮಾಡಿಕೊಡುತ್ತದೆ; ಪ್ರತಿಯೊಂದೂ ತನ್ನ ಮೇಲೆ ಪ್ರಭಾವ ಬೀರುವಂಥ ಇತರ ಕಾರ್ಯನೀತಿಗಳೊಂದಿಗೆ ಸರಿಯಾಗಿ ಸಮನ್ವಯಗೊಂಡಿರಬೇಕು. ಇದೇ ತತ್ವದ ಆಧಾರದ ಮೇಲೆ ಕೆಲವು ಪ್ರದೇಶಗಳು ಮತ್ತು ವಲಯಗಳಲ್ಲಿ ಮಾತ್ರವೇ ಸಮತೋಲನವಿಲ್ಲದ ಅಭಿವೃದ್ಧಿಯನ್ನು ಉಂಟು ಮಾಡುವ ಇಂದಿನ ಪ್ರವೃತ್ತಿಯನ್ನು ಕಡಿಮೆ ಮಾಡಲು ಉದ್ದೇಶಿತ ನಗರಾಡಳಿತ ಯೋಜನೆಯು ರಾಜ್ಯದ ಅಭಿವೃದ್ಧಿಯ ಒಟ್ಟಾರೆ ಕಾರ್ಯನೀತಿಯೊಂದಿಗೆ ಸಮಸಾಲಿನಲ್ಲಿ ಬರಬೇಕು ಎಂಬುದು ಪ್ರಧಾನ.

ಈ ಗುರಿ ಸಾಧನೆಗಾಗಿ ಹಲವಾರು ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೊದಲಿಗೆ ಬೆಂಗಳೂರಿನ ವಿಷಯವನ್ನೇ ತೆಗೆದುಕೊಂಡರೆ, ಅಭಿವೃದ್ಧಿ ಪ್ರಯತ್ನಗಳು ನಗರ ಕೇಂದ್ರದ ಸುತ್ತಲೂ ಇರುವಂಥ ವಿಶಾಲ ಮಹಾನಗರ ಪ್ರದೇಶಗಳಿಗೆ (BMR) ವರ್ಗಾವಣೆಯಾಗಬೇಕು. ಎರಡನೆಯದಾಗಿ ರಾಜ್ಯದ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುವ ಕೆಲವಾರು ನಿರ್ದಿಷ್ಟ ಕೈಗಾರಿಕಾ ಅಭಿವೃದ್ಧಿ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಬೇಕು (ಹೊಸಪೇಟೆ–ಬಳ್ಳಾರಿ–ರಾಯಚೂರು; ತುಮಕೂರು–ಬೆಂಗಳೂರು–ಹೊಸೂರು–ಮೈಸೂರು–ಮಂಡ್ಯ;ಬೆಳಗಾಂ–ಹುಬ್ಬಳ್ಳಿ–ಧಾರವಾಡ–ದಾವಣಗೆರೆ–ಹರಿಹರ; ಮತ್ತು ರತ್ನಗಿರಿ–ಗೋವಾ–ಕಾರವಾರ–ಮಂಗಳೂರು). ಎರಡನೆಯದಾಗಿ, ಚಿಕ್ಕಪುಟ್ಟ ಪಟ್ಟಣಗಳು ಮತ್ತು ನಗರ ಪ್ರದೇಶಗಳು ಬೆಳವಣಿಗೆಯ ಕೇಂದ್ರಗಳಾಗಿ ರೂಪುಗೊಳ್ಳುವುದಕ್ಕೆ ಅವಕಾಶವಾಗುವಂತೆ ಅವುಗಳ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದಕ್ಕಾಗಿ ಅವುಗಳ ಸಮೀಪ ಕೈಗಾರಿಕಾ ವಲಯಗಳನ್ನು ಸ್ಥಾಪಿಸಬಹುದು. ಮೂರನೆಯದಾಗಿ, ಸ್ಥಳೀಯ ಆಡಳಿತಗಳು ತಾವೇ ಪ್ರಮುಖ ಅಭಿವೃದ್ಧಿ ಸಾಧ್ಯತೆಗಳನ್ನು ತಾವೇ ಗುರುತಿಸಿ ಅವುಗಳು ತಮ್ಮ ಸ್ವಂತ ಆರ್ಥಿಕಾಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸುವುದಕ್ಕಾಗಿ ಅವುಗಳನ್ನು ಸಶಕ್ತಗೊಳಿಸಬೇಕು ಮತ್ತು ಉತ್ತೇಜಿಸಬೇಕು. ಈ ಕಾರ್ಯವನ್ನು ಪ್ರಾರಂಭಿಸುವುದಕ್ಕಾಗಿ ಮತ್ತು ಈ ನಗರಗಳು ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ಸ್ಪರ್ಧೆ ನಡೆಸಲು ನೆರವಾಗುವುದಕ್ಕಾಗಿ ಸ್ಥಳೀಯ ಆರ್ಥಿಕ ಸ್ಥಿತಿಗತಿ ಹೇಗಿದೆ ಎಂಬುದನ್ನು ನಿರ್ಧರಿಸತಕ್ಕದ್ದು.

## 2. ನಗರ ಯೋಜನೆಗಾಗಿ ಹೊಸ ದೃಷ್ಟಿಕೋನ

ನಗರ ಯೋಜನೆ ನಡೆದುಬಂದ ದಾರಿ, ನಗರಗಳು ಮತ್ತು ಅವುಗಳ ಸುತ್ತಮುತ್ತಲಿನ ಪ್ರದೇಶಗಳ ಸಮರ್ಪಕ ಅಭಿವೃದ್ಧಿಗೆ ಏನೇನೂ ಸಾಲದು. ಆದ್ದರಿಂದ, ಸ್ಥಳ ನಿರ್ದಿಷ್ಟ ಯೋಜನಾ ವಿಧಾನವನ್ನು ಬಿಟ್ಟು ಬೆಂಗಳೂರು, ಹುಬ್ಬಳ್ಳಿ– ಧಾರವಾಡ ಮತ್ತು ಮೈಸೂರು ನಗರಗಳಲ್ಲಿ ಬೃಹನ್ನಗರ (ಮೆಟ್ರೋಪಾಲಿಟನ್) ಯೋಜನಾ ಸಮಿತಿಗಳನ್ನು ಮತ್ತು ಇತರೆಡೆಗಳಲ್ಲಿ ಜಿಲ್ಲಾ ಯೋಜನಾ

ಸಮಿತಿಗಳನ್ನು ರಚಿಸಿ ವಿಶಾಲವಾದ ಪ್ರಾದೇಶಿಕ ಯೋಜನಾ ವಿಧಾನಕ್ಕೆ ಬದಲಾಯಿಸಿಕೊಳ್ಳಬೇಕಾದದ್ದು ಅತಿಮುಖ್ಯ. ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರದ್ದುಪಡಿಸಿ ಅವುಗಳ ಪ್ರಕಾರ್ಯಗಳನ್ನು ಬೃಹನ್ನಗರ (ಮೆಟ್ರೋಪಾಲಿಟನ್) ಯೋಜನಾ ಸಮಿತಿಗಳು ಮತ್ತು ಜಿಲ್ಲಾ ಯೋಜನಾ ಸಮಿತಿಗಳಿಗೆ ವರ್ಗಾಯಿಸಬಹುದು. ಜಿಲ್ಲಾ ಮಟ್ಟದ ಪ್ರಾದೇಶಿಕ ಯೋಜನೆಯು, ಸ್ಥಳೀಯ ಯೋಜನಾ ಪ್ರಾಧಿಕಾರಗಳು ರೂಪಿಸಿರುವ ವಿವಿಧ ಯೋಜನೆಗಳನ್ನು ಸಂಯೋಜಿಸಿ ಜಿಲ್ಲೆಯ ಸಮಗ್ರ ಸುಧಾರಣೆಗೆ ಸಂಬಂಧಿಸಿದಂತೆ ಕರಡು ಯೋಜನೆಯನ್ನು ರೂಪಿಸತಕ್ಕದ್ದು. ಇದರೊಂದಿಗೆ, ಯೋಜನಾ ಪ್ರಯತ್ನಗಳು, ಎರಡನೆ ದರ್ಜೆಯ ನಗರಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳನ್ನು ಆಯ್ದು ಪ್ರವಹಿಸಬೇಕು ಮತ್ತು ಹೊಸ ಹೂಡಿಕೆಗಳನ್ನು ಹೆಚ್ಚು ಲಾಭತರುವ ಸಮುಚ್ಚಯಗಳಲ್ಲಿ ಕೇಂದ್ರೀಕರಿಸಬೇಕು. ಯೋಜನೆಗಳಲ್ಲಿ, ಸಾಮಾಜಿಕ ಅಭಿವೃದ್ಧಿಸಹಿತವಾಗಿ ಸಮಗ್ರ ಕೈಗಾರಿಕಾ ಅಭಿವೃದ್ಧಿಯನ್ನು ಸಾಧಿಸುವಂತೆ ಮತ್ತು ಕೈಗಾರಿಕೆಗಳೊಂದಿಗೆ ಸಾಮಾಜಿಕ ಮೂಲಸೌಕರ್ಯ (ಶಾಲೆಗಳು, ಕಾಲೇಜುಗಳು, ಉದ್ಯಾನಗಳು, ಆಸ್ಪತ್ರೆಗಳು, ವಸತಿ ನಿರ್ಮಾಣ, ಮೊದಲಾದವು)ಗಳನ್ನೂ ಜೊತೆಜೊತೆಯಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಲಕ್ಷ್ಯ ನೀಡಬೇಕು.

ಭೂ ಬಳಕೆಯು ಕಾಳಜಿವಹಿಸಬೇಕಾದ ವಿಷಯ. ಏಕೆಂದರೆ ಅಭಿವೃದ್ಧಿಗೆ ಅಡೆತಡೆಬರುವುದೇ ಈ ಕ್ಷೇತ್ರದಲ್ಲಿ. ಉತ್ಪಾದಕತೆ ಮತ್ತು ಸಮುದಾಯದ ಉದ್ದೇಶಗಳಿಗಾಗಿ ಸಾಕಷ್ಟು ಭೂಮಿ ಒದಗಿಸುವುದು, ಮತ್ತು ಸಮಾಜದ ಎಲ್ಲಾ ವರ್ಗಗಳಿಗೂ ಭೂಮಿ ಮತ್ತು ಮನೆ ದೊರಕಿಸಿಕೊಡುವ ಅವಕಾಶವಿರುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆಯಾಗಿರುತ್ತದೆ. ಇದಕ್ಕಾಗಿ ಮೊದಲು ವಿವಿಧ ಪ್ರಸ್ತಾವವನ್ನು ಈಗಿರುವ ಭೂ ಬಳಕೆ ಕಾನೂನುಬದ್ಧವಾಗಿದೆಯೇ, ಇಲ್ಲವೇ ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ರೂಪಿಸುವ ಬದಲಾಗಿ, ವಿವಿಧ ಸ್ಥಳಗಳಲ್ಲಿ, ಅದರಲ್ಲೂ ನಗರಗಳಲ್ಲಿ ಭೂ ಬಳಕೆ ಪರಿಸ್ಥಿತಿ ಹೇಗಿದೆ ಎಂಬುದನ್ನು ಮೊದಲು ದಾಖಲಿಸಬೇಕು. ಭೂ ಬಳಕೆಯನ್ನು ಪ್ರತ್ಯೇಕವಾಗಿ ಬೇರ್ಪಡಿಸುವುದು ವಿಫಲವಾಗಿರುವ ಕಾರ್ಯನೀತಿಯಾಗಿದೆ. ವಿವಿಧ ಭೂ ಬಳಕೆ ನಿಬಂಧನೆಗಳನ್ನು ಪರಿಶೀಲಿಸುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಬಹುದಾಗಿದ್ದು ಅದರ ಶಿಫಾರಸುಗಳನ್ನು ಆಧರಿಸಿ ನಗರ ಭೂ ನೀತಿಯನ್ನು ರೂಪಿಸಬಹುದಾಗಿರುತ್ತದೆ.

ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತೋ ಆ ಉದ್ದೇಶಕ್ಕಾಗಿ ಅದನ್ನು ಕೂಡಲೇ ಬಳಸಿಕೊಳ್ಳುವುದನ್ನು ಖಚಿತಪಡಿಸುವ ನಿಯಮಗಳನ್ನು ರಚಿಸುವುದರೊಂದಿಗೆ ಅಭಿವೃದ್ಧಿ ಯೋಜನೆಗಳಿಗಾಗಿ ಭೂ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕಿರುತ್ತದೆ. ಇದೇ ಸಮಯದಲ್ಲಿ ಭೂ ಸ್ವಾಧೀನಪಡಿಸಿಕೊಳ್ಳುವುದು ಯೋಜನೆಗೆ ಅನುರೂಪವಾಗಿರುವಂತೆ ಉದಾಹರಣೆಗೆ, ಕ.ಕೈ.ಪ್ರ.ಅ.ಮಂ.(KIADB) ಮಾಡಿಕೊಳ್ಳುವ ಭೂ ಸ್ವಾಧೀನತೆಯನ್ನು ಏಕಾಏಕೀ

ಮಾಡದೆ ಪುರಸಭೆ ಅಥವಾ ಯೋಜನಾ ಪ್ರಾಧಿಕಾರಗಳೊಂದಿಗೆ ಸಮಾಲೋಚಿಸಿದ ನಂತರ ಮಾತ್ರವೇ ಮಾಡಿಕೊಳ್ಳುವಂತೆ ಮಾರ್ಗದರ್ಶನ ನೀಡತಕ್ಕದ್ದು. ಅಲ್ಲದೆ, ರಾಜ್ಯದಲ್ಲಿರುವ ಎಲ್ಲಾ ಭೂ ದಾಖಲೆಗಳನ್ನು ಗಣಕೀಕರಣಗೊಳಿಸುವುದು ಮತ್ತು ಭೂ ದಾಖಲೆಗಳಲ್ಲಿರುವ ಹಲವಾರು ವ್ಯತ್ಯಾಸಗಳು ಮತ್ತು ಒಡೆತನಕ್ಕೆ ಸಂಬಂಧಿಸಿದ ವಿವಾದಗಳನ್ನು ಪರಿಹರಿಸುವುದಕ್ಕಾಗಿ 'ನಗರ ಭೂಮಿ' ಕಾರ್ಯಕ್ರಮವನ್ನು ಪ್ರಾರಂಭಿಸಬೇಕು. ನಿರ್ದಿಷ್ಟ ಪ್ರದೇಶಗಳಲ್ಲಿರುವ ಖಾಲಿ ಭೂಮಿಯ ಮೇಲೆ ತೆರಿಗೆ ವಿಧಿಸುವುದೂ ಸೇರಿದಂತೆ ಭೂ ಆಧಾರಿತ ತೆರಿಗೆಗಳನ್ನು ವಿಧಿಸುವುದನ್ನು ಜಾರಿಗೊಳಿಸಬೇಕು.

ಹೊಸ ನೀತಿಯ ಉದ್ದೇಶಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಶಾಸನ ರಚನಾ ಕ್ಷೇತ್ರದಲ್ಲೂ ಸಹ ಸುಧಾರಣೆಗಳನ್ನು ತರಬೇಕಾದ ಅಗತ್ಯವಿದೆ. ಕರ್ನಾಟಕ ಭೂ ಕಂದಾಯ ಮತ್ತು ಸುಧಾರಣಾ ಅಧಿನಿಯಮವನ್ನು ಪರಿಷ್ಕರಿಸಿ ಅದರ ನಿಯಮಗಳನ್ನು ಸರಳೀಕರಿಸಬಹುದು. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮಕ್ಕೆ ಬದಲಾಗಿ ಕರ್ನಾಟಕ ನಗರ ಮತ್ತು ಪ್ರಾದೇಶಿಕ ಯೋಜನಾ ಅಧಿನಿಯಮವನ್ನು ಜಾರಿಗೆ ತರಬಹುದು.

## 3. ಬಡತನವನ್ನು ಕಡಿಮೆ ಮಾಡುವುದು ಮತ್ತು ನಿರ್ಮೂಲನ ಮಾಡುವುದು

ರಾಜ್ಯದ ಜನಸಂಖ್ಯೆಯ ಸುಮಾರು ಮೂರನೇ ಒಂದು ಭಾಗ ಬಡತನ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ, ಅಸಾಂಪ್ರದಾಯಕ ವಲಯದಲ್ಲಿ ಉದ್ಯೋಗಾವಕಾಶವು ಹೆಚ್ಚಾಗಿರುವುದಕ್ಕೆ ಜೊತೆಜೊತೆಯಾಗಿ ಅದೇ ಪ್ರಮಾಣದಲ್ಲಿ ವಸತಿ ಸೌಲಭ್ಯ ದೊರೆಯುತ್ತಿಲ್ಲ. ಪರಿಣಾಮವಾಗಿ ಬಹಳಷ್ಟು ಜನ ಸಮರ್ಪಕ ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ ದೊರೆಯದೆ ಕೊಳಚೆ ಪ್ರದೇಶಗಳಲ್ಲಿ ಜೀವಿಸುವಂತಾಗಿದೆ. ಬಡತನದ ಮಟ್ಟಗಳು ಮತ್ತು ಪ್ರಮಾಣ ಕುರಿತು ಅಂಕಿಅಂಶ ಮಾಹಿತಿ ಅತ್ಯಂತ ಕಡಿಮೆಯಿರುವುದರಿಂದ ಮತ್ತು ನಗರ ಪ್ರದೇಶದ ಜೀವನ ವೆಚ್ಚವನ್ನು ಸರಿಯಾಗಿ ಲೆಕ್ಕಕ್ಕೆ ತೆಗೆದುಕೊಳ್ಳದ ಮಾನದಂಡಗಳನ್ನು ಆಧರಿಸಿರುವ ಕಾರಣ ಈ ಕೊರತೆಯ ಪ್ರಮಾಣ ವಾಸ್ತವಿಕವಾಗಿ ಎಷ್ಟಿದೆ ಎಂಬುದು ಸಮರ್ಪಕವಾಗಿ ತಿಳಿಯುವುದಿಲ್ಲ. ಬಡವರಿಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳು ಸಹ ಸಾಕಷ್ಟು ಪಾಲ್ಗೊಳ್ಳುವಿಕೆಯ ಸ್ವರೂಪದ್ದಲ್ಲವಾದ್ದರಿಂದಾಗಿ ಇವುಗಳನ್ನು ಸಹ ಪರಿಷ್ಕರಿಸಬೇಕಾಗಿದೆ.

ನಗರ ಪ್ರದೇಶದ ಬಡತನದ ಪ್ರಮಾಣವನ್ನು ಸರಿಯಾಗಿ ನಿರ್ಧರಣೆ ಮಾಡಿದ ತರುವಾಯ, ವಸತಿ, ಉದ್ಯೋಗ, ಶಿಕ್ಷಣ, ಆರೋಗ್ಯ ಮತ್ತು ಸಮುದಾಯದ ಸಹಭಾಗಿತ್ವದ ಮೇಲೆ ಒತ್ತು ಕೊಡುವ ಕಾರ್ಯಕ್ರಮವನ್ನು ರೂಪಿಸಬೇಕಿರುತ್ತದೆ. ಮೇಲೆ ಪಟ್ಟಿಮಾಡಲಾದ ಚರ್ಚೆಯ ವಿಷಯಗಳ ಬಗ್ಗೆ

ಮಾತ್ರವಲ್ಲ ಜೀವನೋಪಾಯ, ಕೌಶಲ್ಯಗಳು. ಸಾಲಾವಕಾಶ ಮುಂತಾದಂಥ ಆರ್ಥಿಕ ಅಂಶಗಳ ಮೇಲೆಯೂ ಸಹ ಗಮನಹರಿಸಿ ಬಡತನ ನಿವಾರಣೆಯ ಎಲ್ಲಾ ಅಂಶಗಳ ಬಗೆಗಿನ, ಸಂಪೂರ್ಣ ಜವಾಬ್ದಾರಿಯೊಂದಿಗೆ ಸೂಕ್ತವಾಗಿ ಏಕ ಏಜೆನ್ಸಿ ಮೂಲಕ ಒಂದು ಸಮಗ್ರ ರೀತಿಯಲ್ಲಿ ಸಹ ಈ ಪ್ರಯತ್ನಗಳನ್ನು ನಿರ್ವಹಿಸಬೇಕಾಗಿದೆ. ಕೊಳಚೆ ಪ್ರದೇಶ ಮಂಡಲಿಯು ತನ್ನ ಅಧಿಕಾರದ ಭಾಗಗಳನ್ನು ಹೊಸ ವಿಭಾಗಕ್ಕೆ ಬಿಟ್ಟುಕೊಡುವಂತೆ ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಲಿ ಅಧಿನಿಯಮವನ್ನು ಪರಿಷ್ಕರಿಸಬೇಕಾದ ಅಗತ್ಯವಿದೆ. ' ನಗರ ಪ್ರದೇಶ ಬಡತನ' ದ ವಿಶಾಲ ಆಶ್ರಯದ ಅಡಿಯಲ್ಲಿ ನಿರ್ವಹಿಸಬೇಕಾದ ಅಗತ್ಯವಿರುವಂಥ ವಿಷಯಗಳ ವೈವಿಧ್ಯವನ್ನು ಪರಿಗಣಿಸಿ, ಒಂದು ಸಮಗ್ರ ರೀತಿಯಲ್ಲಿ ಇವುಗಳನ್ನು ಪರಿಹರಿಸಲು ಒಂದು ಕಾರ್ಯನೀತಿಯನ್ನು ಪ್ರತ್ಯೇಕವಾಗಿ ರಚಿಸಬಹುದು.

ಬಡವರಿಗೆ ಕಡಿಮೆ ಖರ್ಚಿನ ಸೂಕ್ತ ವಸತಿಗೃಹಗಳು ದೊರೆಯದೇ ಇರುವುದೇ ಕೊಳೆಗೇರಿಗಳ ಉಗಮಕ್ಕೆ ಕಾರಣ. ಈ ವರ್ಗದ ಜನರ ಬಗ್ಗೆ ಗಮನಹರಿಸಿ ವಸತಿ ಅಭಿವೃದ್ಧಿಯ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ. ನಗರ ಪ್ರದೇಶದ ಕೊಳೆಗೇರಿಗಳಲ್ಲಿರುವ ಸ್ವಾಮ್ಯ ಹಕ್ಕುಗಳನ್ನು ಮಾನ್ಯಮಾಡಲು ಶಾಸನವನ್ನು ರಚಿಸಬೇಕಾಗಿದೆ. ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವದಿಂದ ಕೊಳಗೇರಿ ಮನೆಗಳಿಂದ ಅಲ್ಲಿನ ಜನರು ಸರಿಯಾಗಿ ಅಭಿವೃದ್ಧಿಪಡಿಸಿದ ಮನೆಗಳಲ್ಲಿ ವಾಸಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ನಗರ ಪ್ರದೇಶದ ಬಡವರು ಸಾಧ್ಯವಾದಷ್ಟು ಬೇಗನೆ ಸ್ವಾವಲಂಬಿಗಳಾಗುವ ಹಾಗೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಉದ್ಯೋಗ ತರಬೇತಿ ನೀಡಲು ಸಾಧ್ಯವಿರುವಲ್ಲಿ ಇವುಗಳನ್ನು ಇದರ ಜೊತೆ ಸೇರಿಸಬೇಕು.

## 4. ನಗರ ಮೂಲಸೌಕರ್ಯ ಸೇವಾ ವ್ಯವಸ್ಥೆ

ಮೂಲಸೌಕರ್ಯವು ಅಭಿವೃದ್ಧಿಯ ಬೆನ್ನೆಲುಬಾಗಿರುತ್ತದೆ ಮತ್ತ ಅದರ ಕೊರತೆಯಿಂದ ನಗರಾಭಿವೃದ್ಧಿಯು ನಿರ್ಬಂಧಿತವಾಗುತ್ತದೆ. ನಗರ ಪ್ರದೇಶಗಳ ಮೂಲಸೌಕರ್ಯದ ಬೆನ್ನೆಲುಬಾದ – ಕುಡಿಯುವ ನೀರು ಸರಬರಾಜು, ನೈರ್ಮಲ್ಯ, ಘನತ್ಯಾಜ್ಯ ನಿರ್ವಹಣೆ ಮತ್ತು ಸಾರಿಗೆ ಈ ನಾಲ್ಕು ಕ್ಷೇತ್ರಗಳನ್ನು ಬಲಪಡಿಸುವಂಥ ಪ್ರಬಲ ಕಾರ್ಯತಂತ್ರದ ಅಗತ್ಯವಿದೆ. ನೀರಿನ ಸರಬರಾಜಿಗಾಗಿ ಸ್ಥಳೀಯ ಸಂಸ್ಥೆಗಳನ್ನು ಹೊಣೆಗಾರರನ್ನಾಗಿ ಮಾಡಬೇಕು ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಅಭಿವೃದ್ಧಿ ಮಂಡಲಿ (ಕೆಯುಡಬ್ಲ್ಯು ಎಸ್ ಮತ್ತು ಡಿಬಿ) ಯನ್ನು, ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯನ್ನು ನಗರಗಳಲ್ಲಿ ಸಾಮರ್ಥ್ಯ ಉಂಟುಮಾಡುವಂತೆ ಸೂಕ್ತವಾಗಿ ಪುನಾರಚಿಸಬೇಕು. ಇದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಲು ಒಂದು ನಿಯಂತ್ರಣ

ಪ್ರಾಧಿಕಾರವನ್ನು ರಚಿಸುವ ಅಗತ್ಯವಿದೆ. ಸಹಾಯಾನುದಾನದ ಆಧಾರದ ಮೇಲೆ ಬಡವರಿಗೆ ಸೇವೆಗಳನ್ನು ಒದಗಿಸುವುದಲ್ಲದೆ, ನೀರು ಸರಬರಾಜಿನ ವೆಚ್ಚವನ್ನು ವಸೂಲಿ ಮಾಡಲು ಸರಿಯಾದ ಕಾರ್ಯವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದೂ ಮುಖ್ಯ. ಲೆಕ್ಕಕ್ಕೆ ಸಿಗದ ನೀರಿನ ಬಳಕೆಯನ್ನು ಕನಿಷ್ಠಪಕ್ಷ ಪ್ರಸ್ತುತ ಶೇ.30–40ರ ಪ್ರಮಾಣದಿಂದ ಶೇ. 10–15ಕ್ಕಿಂತಲೂ ಕಡಿಮೆ ಪ್ರಮಾಣಕ್ಕೆ ಇಳಿಸಬೇಕು.

ಜೊತೆಯಲ್ಲಿ, ಲಭ್ಯವಿರುವ ನೀರನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಬಹುದಾದ ರೀತಿಯಲ್ಲಿ ಸಂರಕ್ಷಿಸುವ ಬಗ್ಗೆ ಕೂಡ ಅಷ್ಟೇ ಗಮನಹರಿಸಬೇಕಾದ ಅವಶ್ಯಕತೆಯಿದೆ. ಖಾಸಗಿ ಕ್ಷೇತ್ರದವರು ನೀರು ಸರಬರಾಜಿನಲ್ಲಿ ಯಾವರೀತಿ ಪಾಲ್ಗೊಳ್ಳಬಹುದೆಂದು ಎಚ್ಚರಿಕೆಯಿಂದ ಪರಿಶೀಲಿಸಬೇಕು. ದೀರ್ಘಾವಧಿಯಲ್ಲಿ 24/1 ನೀರು ಸರಬರಾಜು ಮಾಡುವುದೇ ಗುರಿಯಾಗಿರಬೇಕು.

ನೀರು ಸರಬರಾಜಿನ ನೈರ್ಮಲ್ಯ ವ್ಯವಸ್ಥೆ ಎಂದರೆ ಮಾನವ ಮಲಮೂತ್ರಗಳ ಸಾಗಣೆ ನಿರ್ವಹಣೆಯ ಜೊತೆಗೇ ಇದಕ್ಕೆ ಸಂಬಂಧಿಸಿದ ಬೃಹತ್ ಪ್ರಮಾಣದ ಸಾರ್ವಜನಿಕ ಆರೋಗ್ಯ ವಿಷಯಗಳ ನಿರ್ವಹಣೆಯೂ ಸಹ ಸ್ಥಳೀಯ ಸಂಸ್ಥೆಗಳ ಹೊಣೆಗಾರಿಕೆಯಾಗಿರಬೇಕು. ಎಲ್ಲಾ ನಗರಪ್ರದೇಶಗಳಲ್ಲಿ ಪ್ರತಿಯೊಂದು ಮನೆಗೂ ಶೌಚಾಲಯಗಳನ್ನು ಒದಗಿಸಬೇಕು ಮತ್ತು ಇದನ್ನು ಸಾಧಿಸಲು ಒಂದು ನಿರ್ದಿಷ್ಟ ಗಡವು ದಿನಾಂಕವನ್ನು ನಿಗದಿಪಡಿಸಬೇಕು. ಒಳಚರಂಡಿ ವ್ಯವಸ್ಥೆಗೆ ಹೆಚ್ಚು ಬಂಡವಾಳ ವೆಚ್ಚ ಬೇಕಾಗುವುದರಿಂದ ಇವುಗಳನ್ನು ದೊಡ್ಡ ನಗರಗಳಿಗೆ ಸೀಮಿತಗೊಳಿಸಬಹುದು ಮತ್ತು ಸಮಗ್ರ ಕಡಿಮೆ ದರದ ನೈರ್ಮಲ್ಯೀಕರಣಕ್ಕಾಗಿ ಕೇಂದ್ರ ಪುರಸ್ಕೃತ ಯೋಜನೆಯಿಂದ ಸಹ ನಿಧಿಗಳನ್ನು ಬಳಸಿಕೊಂಡು, ಚಿಕ್ಕ ಪಟ್ಟಣಗಳಲ್ಲಿ ನೈರ್ಮಲ್ಯಕ್ಕಾಗಿ ಹೆಚ್ಚು ಸ್ಥಳೀಯವಾದ ಪರಿಹಾರಗಳನ್ನು ಅಭಿವೃದ್ಧಿಪಡಿಸಬೇಕು. ಒಳಚರಂಡಿ ವ್ಯವಸ್ಥೆಗಳಿರುವ ಕಡೆಗಳಲ್ಲಿ ಚರಂಡಿ ನೀರು ಸಂಸ್ಕರಣ ಸ್ಥಾವರಗಳನ್ನು ಸಹ ಸ್ಥಾಪಿಸಬೇಕಾಗಿದ್ದು, ಸಂಸ್ಕರಿಸಿದ ನೀರನ್ನು ಕುಡಿಯುವ ಉದ್ದೇಶವಲ್ಲದ ಇತರ ಉದ್ದೇಶಗಳಿಗೆ ಮರುಬಳಕೆ ಮಾಡುವುದನ್ನು ಸಹ ವ್ಯಾಪಕವಾಗಿ ಕೈಗೊಳ್ಳಬೇಕು.

ನಗರ ಸ್ಥಳೀಯ ಸಂಸ್ಥೆಗಳಿಂದ (ಯುಎಲ್‌ಬಿಗಳು) ಒದಗಿಸಲಾದ ಘನತ್ಯಾಜ್ಯ ನಿರ್ವಹಣಾ ಸೇವೆಗಳು ತ್ಯಾಜ್ಯ ನಿರ್ವಹಣೆಯ ಚಟುವಟಿಕೆಗಳನ್ನು ನಡೆಸಲು ಸೂಕ್ತ ಸಾಧನಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸುವುದನ್ನು ಒಳಗೊಂಡು, ಸಮಗ್ರವಾಗಿರಬೇಕು ಮತ್ತು ಸ್ವಯಂಪೂರ್ಣವಾಗಿರಬೇಕು. ಉತ್ತಮ ನೈರ್ಮಲ್ಯ ವ್ಯವಸ್ಥೆ ಮತ್ತು ತ್ಯಾಜ್ಯ ನಿರ್ವಹಣಾ ಪದ್ಧತಿಗಳನ್ನು ಉತ್ತೇಜಿಸಲು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಬೇಕು.

ನಗರಗಳ ಆಂತರಿಕ ಸಾರಿಗೆ ಸೇವೆಗಳು, ಮೋಟಾರುಚಾಲಿತವಲ್ಲದ ಸಾರಿಗೆಯ ಕಡೆಗೆ ಪ್ರತ್ಯೇಕವಾದ ಮತ್ತು ಸ್ಪಷ್ಟವಾದ ಒತ್ತು ನೀಡುವುದು ಸೇರಿದಂತೆ ಬಹುಮುಖ ವಿಧಾನಗಳ ಕಡೆಗೆ

ಗಮನಹರಿಸುವುದಾಗಿರಬೇಕು. ಎಲ್ಲಾ ಒಂದನೇ ದರ್ಜೆ ನಗರಗಳಿಗಾಗಿ ನಗರ ಸಂಚಾರ ಯೋಜನೆಗಳನ್ನು ಸಿದ್ಧಪಡಿಸಬೇಕು. ನಗರ ಸಾರಿಗೆಯ ಕಾರ್ಯನೀತಿ ಮತ್ತು ಪ್ರಯತ್ನಗಳು ಸಾರ್ವಜನಿಕ ಸಾರಿಗೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದ್ದು ಅದರಿಂದ ಖಾಸಗೀ ಸಾರಿಗೆಗಿಂತಲೂ ಈ ವಲಯದಲ್ಲಿ ಇನ್ನಷ್ಟು ಹೆಚ್ಚಿನಂಶ ಯಶಸ್ಸುಗಳಿಸಲು ಸಾಧ್ಯವಾಗುತ್ತದೆ. ಸಾರ್ವಜನಿಕ ಸಾರಿಗೆಗೆ ಹಣ ಒದಗಿಸುವ ಮತ್ತು ಬೆಲೆ ನಿಗದಿಪಡಿಸುವ ಹಾಗೂ ಖಾಸಗೀ ಸಾರಿಗೆಗೆ ಲಗತ್ತಾದ ವಾಹನ ನಿಲುಗಡೆ ಸ್ಥಳದಂತಹ ಸಂಬಂಧಿತ ಅಗತ್ಯತೆಗಳ ಬಗ್ಗೆ ಬೆಲೆ ನಿಗದಿ ಸಹ ಈ ಹೊಸ ಆದ್ಯತೆಯಲ್ಲಿ ಒಳಗೊಂಡಿರಬೇಕು. ನಗರಾಭಿವೃದ್ಧಿಗಾಗಿ ಗುರುತಿಸಲಾದ ಕಾರಿಡಾರ್‌ಗಳ ಉದ್ದಕ್ಕೂ ಇಂಟರ್ ಸಿಟಿ ಜೋಡಣೆಯನ್ನು ಸಹ ಇನ್ನಷ್ಟು ಹೆಚ್ಚಿಸಬೇಕು, ಮತ್ತು ವಿವಿಧ ಬಗೆಯ ಸಾರ್ವಜನಿಕ ಸಾರಿಗೆ ವಿಧಾನಗಳ ನಡುವೆ ಒಂದರ ಬದಲಾಗಿ ಮತ್ತೊಂದು ಪ್ರತಿಯೊಂದು ಕಡೆಯಲ್ಲೂ ಲಭ್ಯವಿರುವಂತೆ, ಸುಗಮಗೊಳಿಸಬೇಕು. ಮೈಸೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯಲ್ಲಿ ವಿಮಾನನಿಲ್ದಾಣಗಳನ್ನು, ರಾಜ್ಯದಲ್ಲಿನ ಹೊಸ ಸಾರಿಗೆ ಸಂಪರ್ಕ ಕೇಂದ್ರಗಳಾಗಿ ಸೇವೆ ಸಲ್ಲಿಸಲು ಮೇಲ್ದರ್ಜೆಗೇರಿಸಬೇಕು.

ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರವನ್ನು, ಮಹಾನಗರಗಳನ್ನು ರೂಪಿಸಿರುವ ಇತರ ಪ್ರದೇಶಗಳಲ್ಲಿ ಸಾರಿಗೆ ಯೋಜನಾ ಸಂಸ್ಥೆಗಂತೆಯೇ ಅದು ತನ್ನ ಯೋಜನಾ ನಿರ್ಣಯಗಳನ್ನು ಅಗತ್ಯವಾಗಿ ಜಾರಿಗೊಳಿಸುವ ಅಧಿಕಾರ ನೀಡಿ ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಬೇಕು. ಅಲ್ಲದೆ, ಸಾರಿಗೆ ಮಾತ್ರವಲ್ಲ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯಲ್ಲಿಯೂ ದರವಸೂಲಿ ಮತ್ತು ಸಹಾಯಧನದ ಬಗೆಗಿನ ಕಾರ್ಯನೀತಿಯನ್ನು ಸ್ಪಷ್ಟೀಕರಿಸಲು ನಗರ ಸೇವೆಗಳ ನಿಯಂತ್ರಣ ಪ್ರಾಧಿಕಾರವೊಂದನ್ನು ಒಳಗೊಳ್ಳಬಹುದು.

## 5. ನಗರ ಪ್ರದೇಶಗಳಲ್ಲಿ ಪರಿಸರ ದೃಷ್ಟಿಯ ಸುಸ್ಥಿರತೆ

ಗಾಳಿ ಮತ್ತು ನೀರಿನ ಉತ್ತಮ ಗುಣಮಟ್ಟಕ್ಕಾಗಿ ಹಾಗೂ ವಿದ್ಯುಚ್ಛಕ್ತಿಯ ಬಳಕೆಗಾಗಿ ನಿರ್ದಿಷ್ಟ ಪ್ರಮಾಣಕಗಳನ್ನು ಗೊತ್ತುಪಡಿಸಿಲ್ಲದಿರುವುದರಿಂದ ನಮ್ಮ ನಗರ ಪ್ರದೇಶಗಳು ಸುಸ್ಥಿರವಾಗಿಲ್ಲ ಮತ್ತು ಇದನ್ನು ತಡೆಯಲು ಮತ್ತು ನಗರ ಪ್ರದೇಶಗಳಲ್ಲಿ ಪರಿಸರದ ಗುಣಮಟ್ಟ ದಿನೇದಿನೇ ಕೆಳಗಿಳಿಯುವುದನ್ನು ತಪ್ಪಿಸಿ ಅದು ದಿನೇದಿನೇ ಉತ್ತಮವಾಗುವಂತೆ ಮಾಡಲು ತುರ್ತು ಗಮನಕೊಡಬೇಕಾಗಿದೆ. ನೀರಿನ ಸಂಪನ್ಮೂಲಗಳ ಸಂರಕ್ಷಣೆ, ನಷ್ಟವಾದ ಸಂಪನ್ಮೂಲಗಳ ಪುನಶ್ಚೇತನ, ಮತ್ತು ನೀರಿನ ಮರುಬಳಕೆಯನ್ನು ಹೆಚ್ಚಿಸಲು ನೀರಿನ ನಿರ್ವಹಣೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ. ಗಾಳಿಯ ಗುಣಮಟ್ಟ ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ಸಹ ಹೆಚ್ಚು ವ್ಯಾಪಕವಾಗುವಂತೆ ಮಾಡಬೇಕು ಮತ್ತು ಇದನ್ನು ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ

ಸಾರ್ವಜನಿಕ ಆರೋಗ್ಯ ನಿರ್ವಹಣೆಯಲ್ಲಿ ಸೇರಿಸಬೇಕು. ವಿದ್ಯುಚ್ಛಕ್ತಿಗೆ ಸೂಕ್ತ ದರ ನಿಗದಿಪಡಿಸುವ ಮೂಲಕ ಮತ್ತು ವಿದ್ಯುತ್ತಿನ ಅಗತ್ಯತೆಯನ್ನು ಕಡಿಮೆ ಮಾಡುವ ಪ್ರಯತ್ನಗಳನ್ನು ಗುರುತಿಸುವಂಥ ಕಾರ್ಯಕ್ರಮಗಳ ಮೂಲಕ ಇಂಧನ ಸಂರಕ್ಷಣೆಗೆ ಉತ್ತೇಜನ ನೀಡಬೇಕು.

ಇವುಗಳ ಜೊತೆಯಲ್ಲಿ, ನಗರಗಳ ಮತ್ತು ಪಟ್ಟಣಗಳ ನೈಸರ್ಗಿಕ ಮತ್ತು ಸಾಂಸ್ಕೃತಿಕ ಪರಂಪರೆಯ ನಿರ್ಮಾಣದ ಕಡೆಗೆ ಗಮನಹರಿಸಬೇಕು. ಈ ಪರಂಪರೆಯು ಇನ್ನಷ್ಟು ಕ್ಷೀಣಿಸದಂತೆ ಅಥವಾ ನಷ್ಟವಾಗದಂತೆ ನೋಡಿಕೊಳ್ಳಬೇಕಾದ ವಿಶೇಷ ಅಗತ್ಯವಿದೆ. ಬೆಂಗಳೂರು ಮತ್ತು ಮೈಸೂರು ಎರಡೂ ಜಿಲ್ಲೆಗಳಿಗೆ ಸೇರಿ ಒಂದು ಹಾಗೂ ಇಡೀ ರಾಜ್ಯಕ್ಕೆ ಸೇರಿ ಮತ್ತೊಂದು ನಗರ ಕಲಾ / ಪರಂಪರೆ ಆಯೋಗವನ್ನು ರಚಿಸಬೇಕು. ಈ ಸಂಸ್ಥೆಯು ಪರಂಪರೆಯ ಸಂರಕ್ಷಣೆ ಹಾಗೂ ಸುರಕ್ಷತೆಯನ್ನು ನೋಡಿಕೊಳ್ಳಲು ಸಾಕಷ್ಟು ನಿಧಿಗಳನ್ನು ದೊರಕಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು. ಖಾಸಗೀ ಒಡೆತನದ ಪರಂಪರೆಯ ಕಟ್ಟಡಗಳ ಸಂರಕ್ಷಣೆಯನ್ನು ಸಾಧ್ಯಗೊಳಿಸಲು ಅಗತ್ಯವಾದ ಶಾಸನಾತ್ಮಕ ತಿದ್ದುಪಡಿಗಳನ್ನು ಮಾಡುವುದೂ ಸಹ ಅಗತ್ಯ.

## 6. ಪ್ರಜಾಸತ್ತಾತ್ಮಕ ನಗರಾಡಳಿತ

ಬಹುತೇಕ ಎರಡು ದಶಕಗಳಷ್ಟು ಹಿಂದೆಯೇ ಸಂವಿಧಾನದ 74ನೇ ತಿದ್ದುಪಡಿಯಾಗಿದ್ದರೂ ಸಹ, ಕರ್ನಾಟಕವನ್ನೊಳಗೊಂಡಂತೆ ಬಹುಪಾಲು ರಾಜ್ಯಗಳು ತಮಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ನಗರಾಡಳಿತ ಪ್ರಕಾರ್ಯಗಳನ್ನು ಸಂಪೂರ್ಣವಾಗಿ ವಹಿಸಿಕೊಟ್ಟಿರುವುದಿಲ್ಲ. ಅಲ್ಲದೆ, ಅಧಿನಿಯಮದಲ್ಲಿ ಸೂಚಿಸಲಾದಂತೆ ನಗರಾಡಳಿತದಲ್ಲಿ ನಾಗರಿಕರ ಸಂಪೂರ್ಣ ಸಹಭಾಗಿತ್ವವೂ ಕೂಡ ಇನ್ನೂ ಸಾಧ್ಯವಾಗಿಲ್ಲ. ಕಸ್ತೂರಿ ರಂಗನ್ ಸಮಿತಿಯ (ಬೆಂಗಳೂರು ಆಡಳಿತ ಕುರಿತ ತಜ್ಞ ಸಮಿತಿ) ವರದಿ ಹಾಗೂ ರಾಜ್ಯ ಸರ್ಕಾರಕ್ಕೆ ಇತರ ಸಲಹಾ ಮಂಡಳಿಗಳು ಮಾಡಿದ ತದನಂತರದ ಶಿಫಾರಸುಗಳಿಗನುಗುಣವಾಗಿ ಪೂರ್ಣವಾದ, ಅಧಿಕಾರವನ್ನು ವರ್ಗಾಯಿಸುವ ಸಹಭಾಗಿತ್ವದ ಆಡಳಿತವನ್ನು ನೀಡುವ ಮೂಲಕ ಈ ಪರಿವರ್ತನೆಯನ್ನು ಈಡೇರಿಸುವ ಕಾರ್ಯ ಈ ಕ್ಷೇತ್ರದಲ್ಲಿ ಅಗತ್ಯವಾಗಿ ಆಗಬೇಕಾಗಿದೆ.

ಪರ್ಯಾಲೋಚನಾ ನಗರಸಭೆ ಹಾಗೂ ಕಾರ್ಯಾಂಗದ ಆಯುಕ್ತರ ಮಧ್ಯೆ ಅಧಿಕಾರ ವಿಭಜನೆಯಾಗುವ ವ್ಯವಸ್ಥೆಯ ಬದಲು, ರಾಜಕೀಯ ಉತ್ತರದಾಯಿತ್ವ ಹಾಗೂ ಹೊಣೆಗಾರಿಕೆ ಜೊತೆಜೊತೆಯಾಗುವ ವ್ಯವಸ್ಥೆಯಿರಬೇಕು. ಇದನ್ನು ಸಾಧಿಸಬೇಕಾದರೆ ಕಾರ್ಯಾಂಗದ ಅಧಿಕಾರಗಳು ಚುನಾಯಿತ ಪ್ರತಿನಿಧಿಗಳಲ್ಲಿ ನಿಹಿತವಾಗಬೇಕು. ಈ ಬಗ್ಗೆ ಹಲವಾರು ಕ್ರಮಗಳನ್ನು ಕೈಗೊಳ್ಳಬಹುದಾಗಿದೆ. ಕೌನ್ಸಿಲರು (ನಗರಸಭಾ ಸದಸ್ಯ)ಗಳಿಂದಾಯ್ದ ಸದಸ್ಯರನ್ನೊಳಗೊಂಡ ಮಹಾಪೌರ

ಸಮಿತಿಯೊಂದಿಗೆ ನಗರ ಹಾಗೂ ಪಟ್ಟಣಗಳಲ್ಲಿ ನೇರವಾಗಿ ಚುನಾಯಿತರಾದ ಮಹಾಪೌರರಿರುವ ಸಂಸ್ಥೆಗಳು ಕಾರ್ಯಕಾರೀ ಅಧಿಕಾರಗಳನ್ನು ಚಲಾಯಿಸುವುದು ಅವುಗಳಲ್ಲಿ ಒಂದು. ಇಲ್ಲವೇ ಪರ್ಯಾಯವಾಗಿ ಮಹಾಪೌರರನ್ನು ಕೌನ್ಸಿಲರುಗಳ ಪೈಕಿಯಿಂದಲೇ ಆಯ್ಕೆ ಮಾಡಬೇಕು. ಆದರೆ, ಆತ ಈಗಿರುವುದಕ್ಕಿಂತ ಹೆಚ್ಚು ಅಧಿಕಾರಗಳನ್ನು ಹಾಗೂ ಹೆಚ್ಚು ಅರ್ಥಪೂರ್ಣವಾಗಿ ಅಧಿಕಾರಾವಧಿಯನ್ನು (ಮೇಯರ್ ಇನ್ ಕೌನ್ಸಿಲ್) ಹೊಂದಿರಬೇಕು. ಇಂಥ ನೇರ ಉತ್ತರದಾಯಿತ್ವವು ರಾಜ್ಯದ ಎಲ್ಲ ಕಡೆಗಳಲ್ಲಿ ನಗರ ನೇತಾರರನ್ನು ಬೆಳೆಸಲು ಸಹಾಯಕವಾಗುವುದು,

ಇದರ ಜೊತೆಯಲ್ಲಿ, ಎಲ್ಲ 1ನೇ ದರ್ಜೆ ನಗರಗಳಲ್ಲಿ ಒಂದು ವಾರ್ಡಿನಲ್ಲಿನ ನೆರೆಹೊರೆಯ ಬೇರೆ ಬೇರೆ ಪ್ರದೇಶಗಳಿಂದ ಚುನಾವಣೆಗಳ ಮೂಲಕ ಆಯ್ಕೆ ಮಾಡಿದ ಸದಸ್ಯರನ್ನೊಳಗೊಂಡ ಚುನಾಯಿತ ವಾರ್ಡ್ ಸಮಿತಿಗಳ ಒಂದು ವ್ಯವಸ್ಥೆಯನ್ನು ಪ್ರಾರಂಭಿಸಬೇಕು. (ಎಲ್ಲ ಪೌರಾಡಳಿತ ಪ್ರದೇಶಗಳಲ್ಲಿ ನೆರೆಹೊರೆ ಪ್ರದೇಶ ಸಮಿತಿಗಳೇ ಇರಬೇಕಾದುದು ಅಗತ್ಯ). ನೆರೆಹೊರೆ ಪ್ರದೇಶಗಳ ಚುನಾವಣೆಗಳಲ್ಲಿ ಚುನಾಯಿತರಾದವರು ವಾರ್ಡ್ ಸಮಿತಿಯ ಸದಸ್ಯರಾಗಿರಬೇಕು, ಕೌನ್ಸಿಲರನು ಸದರಿ ಸಮಿತಿಯ ಅಧ್ಯಕ್ಷರಾಗಿರಬೇಕು. ದೂರು ನಿವಾರಣಾ ವ್ಯವಸ್ಥೆಯನ್ನಾರಂಭಿಸಿ ಅದರ ಉಸ್ತುವಾರಿ ಹಾಗೂ ಪುನರವಲೋಕನ ಮಾಡಿ ಸಮಯಬದ್ಧವಾಗಿ ಸಾರ್ವಜನಿಕ ಸೇವೆ ನೀಡುವ ಮೂಲಕ ನಾಗರಿಕರು ಪಾಲ್ಗೊಳ್ಳುವಂತೆ ಮಾಡಬೇಕು. ಆಯವ್ಯಯ ತಯಾರಿಕೆ ಕಾರ್ಯದಲ್ಲೂ ನಾಗರಿಕರು ಪಾಲ್ಗೊಳ್ಳುವಂತೆ ಮಾಡಿದರೆ ವಿವಿಧ ನಗರಗಳು ಹಾಗು ಪಟ್ಟಣಗಳ ಯೋಜನೆಗಳಲ್ಲಿ ಸ್ಥಳೀಯರ ಆದ್ಯತೆಗಳಿಗೆ ಪ್ರಾಶಸ್ತ್ಯ ಸಿಗುತ್ತದೆ.

ಈ ಪರಿವರ್ತನೆಯನ್ನು ಈಡೇರಿಸಲು, ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ವರ್ಗಾವಣೆ ಮಾಡಿ ಅವರಿಗೆ ಅಗತ್ಯವಾದ ಆಡಳಿತ ಸ್ವಾತಂತ್ರ್ಯವನ್ನು ಹಾಗೂ ಆರ್ಥಿಕ ಸ್ವಾಯತ್ತತೆಯನ್ನು ನೀಡಬೇಕು. ಇದರ ವ್ಯಾಪ್ತಿ, ಆಯಾ ನಗರ ಪ್ರದೇಶದ ಗಾತ್ರಕ್ಕನುಸಾರ ಬೇರೆ ಬೇರೆಯಾಗಿರುತ್ತದೆ, ಕಾಲಾನುಕ್ರಮದಲ್ಲಿ, ಹಂತ ಹಂತವಾಗಿ 12ನೇ ಅನುಸೂಚಿಯಲ್ಲಿ ತಿಳಿಸಲಾದ ಎಲ್ಲ ಪ್ರಕಾರ್ಯಗಳನ್ನು ಅವರಿಗೆ ವರ್ಗಾಯಿಸಬೇಕು. ಪ್ರಸ್ತುತ ರಾಜ್ಯ ಸರ್ಕಾರದ ಮಟ್ಟದಲ್ಲಿ, ಈ ಪ್ರಕಾರ್ಯಗಳ ಪೈಕಿ ಕೆಲವನ್ನು ನಿರ್ವಹಿಸುತ್ತಿರುವ ಅರೆ ಸರ್ಕಾರಿ ಸಂಸ್ಥೆಗಳನ್ನು ಪೌರಾಡಳಿತ ಸಂಸ್ಥೆಯ ಅಧಿಕಾರದಡಿಯಲ್ಲಿ ತರಬೇಕು.

ಕರ್ನಾಟಕ ಪುರಸಭೆಗಳ ಅಧಿನಿಯಮ, 1964 ಹಾಗೂ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರನ್ನಲ್ಲದೇ ಪೌರಾಡಳಿತದ ಯೋಜನೆ, ಅಭಿವೃದ್ಧಿ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದ ಕಾನೂನುಗಳನ್ನು ಸೂಕ್ತವಾಗಿ ಪರಿಷ್ಕರಿಸಿ ಪೌರಾಡಳಿತದ ಇಡೀ ಕಾನೂನುಗಳನ್ನು ಆಮೂಲಾಗ್ರವಾಗಿ ಸರಿಪಡಿಸಬೇಕು. ಬೆಂಗಳೂರಿನ ಸಮಸ್ಯೆಗಳು ಹಾಗೂ ಅಗತ್ಯಗಳು ರಾಜ್ಯದ ಇತರ

ನಗರಗಳಿಗಿಂತ ತುಂಬಾ ವಿಭಿನ್ನ ರೀತಿಯುವಾಗಿದ್ದು, ಬೆಂಗಳೂರಿನ ಅಭಿವೃದ್ಧಿಗಾಗಿ ಬೇರೆ ಶಾಸನವನ್ನು ರಚಿಸಬೇಕಾದ ಅಗತ್ಯವಿದೆ.

## 7. ಸಾಕಷ್ಟು ಆರ್ಥಿಕ ಸಂಪನ್ಮೂಲದ ಸಂಗ್ರಹಣೆ:

ಕರ್ನಾಟಕದ ನಗರ ಪ್ರದೇಶಗಳ ಅಭಿವೃದ್ಧಿಗೆ ಸುಮಾರು 1,00,000 ಕೋಟಿ ರೂ.ಗಳ ಸಂಪನ್ಮೂಲಗಳ ಕೊರತೆಯಿದ್ದು, ಬೆಂಗಳೂರು ನಗರವೊಂದಕ್ಕೇ ಇದರ ಶೇಕಡಾ 50ಕ್ಕಿಂತ ಹೆಚ್ಚು ಬೇಕು ಎಂದು ಅಂದಾಜು ಮಾಡಲಾಗಿದೆ. ಆದರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಇಷ್ಟೊಂದು ಸಂಪನ್ಮೂಲವನ್ನು ಸಂಗ್ರಹಿಸುವುದು ಸಾಧ್ಯವಾಗುತ್ತಿಲ್ಲ (ಪರಿಸ್ಥಿತಿ ಹೀಗಿದ್ದರೂ ಅವರ ಆದಾಯಕ್ಕಿಂತ ಅವರ ವೆಚ್ಚ ಕಡಿಮೆಯೇ ಇರುತ್ತಿದೆ ಎಂಬುದು ಗಮನಾರ್ಹ). ಅದರಲ್ಲೂ ತಮ್ಮ ಬಹುಪಾಲು ಹಣಕಾಸು ಅಗತ್ಯಗಳಿಗೆ ಅನುದಾನಗಳನ್ನೇ ಅವಲಂಬಿಸಿರುವ ಪುರಸಭೆಗಳು ಹಾಗೂ ವಿಶೇಷವಾಗಿ ಪಟ್ಟಣ ಪಂಚಾಯಿತಿಗಳ ಪರಿಸ್ಥಿತಿ ಇನ್ನು ಶೋಚನೀಯ.

ಯಾವುದನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಬೇಕೆಂಬುದನ್ನು ನಿರ್ಧರಿಸುವುದಕ್ಕೆ ಮತ್ತು ತೆರಿಗೆಯನ್ನು ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಸ್ವತ್ತು ತೆರಿಗೆ ವಿಧಿಸುವ ವ್ಯವಸ್ಥೆಯನ್ನು ಸುಧಾರಿಸಬೇಕಾದ ಅಗತ್ಯವಿದೆ. ಶಿಕ್ಷಣ ಸಂಸ್ಥೆಗಳು ಮತ್ತು ಧರ್ಮಾದಾಯ ಸಂಸ್ಥೆಗಳಿಗೆ ಹಾಗೂ ಎಲ್ಲ ಸರ್ಕಾರಿ ಸ್ವತ್ತುಗಳಿಗೆ ವಿವಿಧ ವಿನಾಯಿತಿಗಳನ್ನು ನೀಡಲಾಗುತ್ತಿದೆ. ಇದನ್ನು ಮರುಪರಿಶೀಲಿಸಬೇಕು. ಸ್ವತ್ತು ತೆರಿಗೆಯನ್ನು ಇತರ ಸುಂಕಗಳಿಂದ ಪ್ರತ್ಯೇಕಿಸಬೇಕು. ಅವುಗಳನ್ನು ಅವುಗಳ ಮಹತ್ವಾಧಾರವಾಗಿ ವಿಧಿಸಬೇಕು. ಜಾಹೀರಾತು ಕ್ಷೇತ್ರ ಹೆಚ್ಚು ತೆರಿಗೆ ಸಂಗ್ರಹಣ ಸಾಮರ್ಥ್ಯವುಳ್ಳದ್ದಾಗಿರುವುದರಿಂದ ಅದನ್ನು ಇನ್ನೂ ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ನಗರ ಸ್ಥಳೀಯ ಸಂಸ್ಥೆಗಳು ಒದಗಿಸುವ ವಿವಿಧ ಸೇವೆಗಳಿಗೆ ವಿಧಿಸುವ ಶುಲ್ಕವನ್ನು, ಸಬ್ಸಿಡಿಯನ್ನು ಕಳೆದು, ಪೂರ್ಣ ವೆಚ್ಚದ ವಸೂಲಿ ತತ್ವವನ್ನಾಧರಿಸಿ ಪರಿಷ್ಕರಿಸಬೇಕು.

ಈ ಮುಂದಿನ ಹಲವಾರು ಪರ್ಯಾಯ ಸಂಪನ್ಮೂಲಗಳನ್ನು ಪರಿಶೀಲಿಸಬಹುದಾಗಿದೆ: (ಎ) ಭೂಮಿಯನ್ನು ಸಂಪನ್ಮೂಲವೆಂದು ಪರಿಗಣಿಸಿ, ಅದರ ಬಳಕೆಗೆ ಅನುಗುಣವಾಗಿ ಬೆಲೆ ವಿಧಿಸುವುದು; (ಬಿ) ಸಾಲಗಳಿಗಾಗಿ ಬಂಡವಾಳ ಮಾರುಕಟ್ಟೆ ಹಾಗೂ ಬಹುಪಕ್ಷೀಯ ಸಂಸ್ಥೆಗಳನ್ನು ಸಂಪರ್ಕಿಸುವುದು (ಸಿ) ವೆಚ್ಚ ಕುರಿತಂತೆ ಅದರಲ್ಲೂ ಬಂಡವಾಳ ವೆಚ್ಚದ ಸಂಬಂಧದಲ್ಲಿ ಸರ್ಕಾರದ ಮೇಲಿರುವ ಒತ್ತಡವನ್ನು ಸರ್ಕಾರಿ ಹಾಗೂ ಖಾಸಗಿ ಪಾಲುದಾರಿಕೆ ಮೂಲಕ ತಗ್ಗಿಸುವುದು (ಡಿ) ಆಡಳಿತೇತರ ಪ್ರಕಾರ್ಯಗಳನ್ನು ಹೊರಗುತ್ತಿಗೆ ನೀಡುವುದು. ಬಂಡವಾಳ ಸ್ವತ್ತುಗಳ ಸೃಜನೆ ಕೇವಲ ಸರ್ಕಾರದ ಹೊಣೆ ಎಂದು ಪರಿಗಣಿಸಬಾರದು.

## ನಗರಾಭಿವೃದ್ಧಿ ನಿರಂತರವಾಗಿ ನಡೆಯುತ್ತಿರುವಂತೆ ನೋಡಿಕೊಳ್ಳುವುದು

ನಗರ ಪ್ರದೇಶಗಳ ಅಭಿವೃದ್ಧಿಯತ್ತ ಸತತ ಗಮನ ನೀಡದಿರುವುದು, ಈ ಹಿಂದಿನ ಅಭಿವೃದ್ಧಿ ಪ್ರಯತ್ನಗಳ ಮುಖ್ಯ ಕೊರತೆಗಳಲ್ಲೊಂದು. ಇನ್ನು ಮುಂದೆ ಅದನ್ನು ನಿವಾರಿಸಲು, ರಾಜ್ಯ ನಗರೀಕರಣ ಆಯೋಗ ಅಥವಾ ಪರಿಷತ್ತನ್ನು ರಚಿಸಿ, ಅದರಲ್ಲಿ ತಜ್ಞರನ್ನು ಸದಸ್ಯರನ್ನಾಗಿ ಮಾಡಿ ಅವರು ರಾಜ್ಯದ ನಗರಾಭಿವೃದ್ಧಿ ಕಾರ್ಯನೀತಿಯನ್ನಾಧರಿಸಿ ಪ್ರಗತಿಯನ್ನು ನಿಯತಕಾಲಿಕವಾಗಿ ಪರಿಶೀಲಿಸುವಂತಾಗಬೇಕು ಹಾಗೂ ಸರ್ಕಾರವು ಅಗತ್ಯವೆಂದು ಭಾವಿಸಿದಾಗಲೆಲ್ಲಾ ಪರಿಷ್ಕರಣೆ ಮಾಡಬೇಕು. ಈ ಆಯೋಗವು ರಾಜ್ಯ ಪಟ್ಟಣ ಯೋಜನಾ ಮಂಡಲಿಯ ಸ್ಥಾನವನ್ನು ವಹಿಸಿಕೊಂಡು ಕಾರ್ಯನೀತಿಯ ಅಭಿವೃದ್ಧಿಗೆ ಸೂಕ್ತವಾದ ಇನ್ನಷ್ಟು ಸಮಗ್ರ ಅಧಿಕಾರ ಹಾಗೂ ಅನುಷ್ಠಾನದ ಉಸ್ತುವಾರಿ ಅಧಿಕಾರ ಹೊಂದಿರಬೇಕು.

ಈಗ ಜವಾಹರಲಾಲ ನೆಹರು ರಾಷ್ಟ್ರೀಯ ನಗರ ನವನಿರ್ಮಾಣ ಯೋಜನೆಯ ವ್ಯಾಪ್ತಿಯ ಆಚೆಗಿರುವ ನಗರಗಳತ್ತ ಸೂಕ್ತ ಗಮನ ಕೇಂದ್ರೀಕರಿಸುವ ಒಂದು ಕರ್ನಾಟಕ ನಗರ ನವ ನಿರ್ಮಾಣ ಅಭಿಯಾನದ ಅಗತ್ಯವಿದೆ.

## ಕ್ರಮಕ್ಕಾಗಿ ಕಾರ್ಯಸೂಚಿ

1. ರಾಜ್ಯ ನಗರೀಕರಣ ಆಯೋಗ/ ಪರಿಷತ್ತನ್ನು (ರಾಜ್ಯ ಪಟ್ಟಣ ಯೋಜನಾ ಮಂಡಲಿಯ ಬದಲಿಗೆ) ಸ್ಥಾಪಿಸುವುದು.

2. ಬೆಂಗಳೂರು, ಹುಬ್ಬಳ್ಳಿ, ಧಾರವಾಡ ಮತ್ತು ಮೈಸೂರುಗಳಿಗಾಗಿ ಮಹಾನಗರ ಯೋಜನಾ ಸಮಿತಿಯನ್ನು ಸ್ಥಾಪಿಸುವುದು.

3. 74ನೇ ಸಂವಿಧಾನದ ತಿದ್ದುಪಡಿಗೆ ಅನುಸಾರವಾಗಿ ಜಿಲ್ಲಾ ಯೋಜನಾ ಸಮಿತಿಗಳನ್ನು ಪುನರ್ ಸ್ಥಾಪಿಸುವುದು.

4. ರಾಜ್ಯ ಪ್ರಾದೇಶಿಕ ಭವಿಷತ್ ಯೋಜನೆ/ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು.

5. ನಗರ ಸ್ಥಳೀಯ ಸಂಸ್ಥೆಯ ರಚನೆಯನ್ನು ಪುನರ್ ಸಂಘಟಿಸುವುದು/ ನೂತನ ಮೇಯರ್ ಆಯ್ಕೆ ಪದ್ಧತಿಯನ್ನು ಆರಂಭಿಸುವುದು (ನೇರವಾಗಿ ಚುನಾಯಿತನಾದ ಮೇಯರ್ ಅಥವಾ ಪರಿಷತ್ತಿನಿಂದ ಆಯ್ಕೆಯಾದ ಮೇಯರ್).

6. ಖನೇ ದರ್ಜೆಯ ನಗರಗಳಲ್ಲಿ ವಾರ್ಡ್ ಸಮಿತಿಗಳನ್ನು (ನೇರ ಚುನಾವಣೆಯ ಮೂಲಕ) ಮತ್ತು ಎಲ್ಲಾ ಪುರಸಭಾ ಪ್ರದೇಶಗಳಲ್ಲಿ ನೆರೆಹೊರೆ ಸಮಿತಿಗಳನ್ನು ರಚಿಸುವುದು.

7. ಸಂವಿಧಾನದ 12ನೇ ಅನುಸೂಚಿಯ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂತ ಹಂತವಾಗಿ ಪ್ರಕಾರ್ಯಗಳನ್ನು ವಹಿಸಿಕೊಡುವುದು.

8. ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರದ್ದುಪಡಿಸಿ, ಯೋಜನೆ ರೂಪಿಸುವ ಅಧಿಕಾರಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವಹಿಸಿಕೊಡುವುದು.

9. ನಗರ ಭೂ ನೀತಿಯನ್ನು ರೂಪಿಸುವುದು– ಭೂ ಬಳಕೆಯ ವಿನಿಯಮನಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಸ್ಥಾಪಿಸುವುದು.

10. ಸಣ್ಣ ಮತ್ತು ಮಧ್ಯಮ ನಗರಗಳಲ್ಲಿ ಮೂಲಸೌಕರ್ಯ, ಅಭಿವೃದ್ಧಿಯ ಬಗ್ಗೆ ಒತ್ತು ನೀಡಲು ಕರ್ನಾಟಕ ನಗರ ನವ ನಿರ್ಮಾಣ ಅಭಿಯಾನವನ್ನು ಸ್ಥಾಪಿಸುವುದು.

11. ಶಾಸನ ರಚನೆ: (ಎ) ಭೂ ಸ್ವಾಧೀನ ಅಧಿನಿಯಮ, ಕರ್ನಾಟಕ ಭೂ ಕಂದಾಯ ಅಧಿನಿಯಮ ಮತ್ತು ಕರ್ನಾಟಕ ಭೂ ಸುಧಾರಣಾ ಅಧಿನಿಯಮಗಳನ್ನು ತಿದ್ದುಪಡಿ ಮಾಡುವುದು- ಭೂ ಸ್ವಾಧೀನ/ ಖರೀದಿಗೆ ಸಂಬಂಧಿಸಿದ ಕಾರ್ಯವಿಧಾನಗಳನ್ನು ಸರಳಗೊಳಿಸುವುದು.

(ಬಿ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ ಅಧಿನಿಯಮದ ಬದಲಾಗಿ ಕರ್ನಾಟಕ ನಗರ ಮತ್ತು ಪ್ರಾದೇಶಿಕ ಯೋಜನಾ ಅಧಿನಿಯಮವನ್ನು ಜಾರಿಗೆ ತರುವುದು.

12. ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರ ಬಡತನ ನಿವಾರಣಾ ಪ್ರಾಧಿಕಾರ/ ಕೋಶಗಳನ್ನು ಸ್ಥಾಪಿಸುವುದು–ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಅಧಿನಿಯಮವನ್ನು ಪರಿಷ್ಕರಿಸುವುದು.

13. ಅರೆ ಸರ್ಕಾರಿ ಸಂಸ್ಥೆಗಳಾದ ಕರ್ನಾಟಕ ನಗರ ನೀರು ಮತ್ತು ಸರಬರಾಜು ಒಳಚರಂಡಿ ಮಂಡಳಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೊಳಚೆ ನಿರ್ಮೂಲನಾ ಮಂಡಳಿಗಳನ್ನು ಪುನರ್‌ರಚಿಸುವುದು.

14. ನಗರ ಸೇವೆಗಳ ನಿಯಂತ್ರಣ ಪ್ರಾಧಿಕಾರವನ್ನು ರಚಿಸುವುದು- ವೆಚ್ಚ ವಸೂಲಾತಿ ಮತ್ತು ಸಹಾಯಧನದ ನೀತಿಯನ್ನು ಸ್ಪಷ್ಟಪಡಿಸುವುದು (ನೀರು, ಒಳಚರಂಡಿ, ಸಾರಿಗೆ).

15. ಪ್ರಥಮ ದರ್ಜೆ ನಗರಗಳಿಗೆ ನಗರ ಸಂಚಾರಿ ಯೋಜನೆಗಳನ್ನು ಸಿದ್ಧಪಡಿಸುವುದು.

16. ಆಸ್ತಿ ತೆರಿಗೆ ಆಡಳಿತವನ್ನು ಸುಧಾರಿಸುವುದು–ವಿನಾಯಿತಿಗಳು ಮತ್ತು ಉಪಕರಗಳನ್ನು ಪರಿಶೀಲಿಸುವುದು.

17. ನಾಗರಿಕರನ್ನು ಭಾಗವಹಿಸುವಂತೆ ಮಾಡಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಪ್ರೋತ್ಸಾಹಿಸುವುದು.

18. ನೇಮಕಾತಿ, ಸ್ಥಳನಿಯುಕ್ತಿ, ಬಡ್ತಿಗಳು ಮತ್ತು ತರಬೇತಿ- ಇವುಗಳ ಬಗ್ಗೆ ಮಾರ್ಗದರ್ಶನ ನೀಡಲು ಪೌರಕಾರ್ಮಿಕರ ನೀತಿಯನ್ನು ರೂಪಿಸುವುದು.

19. ಬೆಂಗಳೂರು ಮಹಾನಗರ ಪ್ರದೇಶದಲ್ಲಿ ನಗರ ಆಡಳಿತ ಕುರಿತಂತೆ ತಜ್ಞ (ಕಸ್ತೂರಿ ರಂಗನ್) ಸಮಿತಿ ನೀಡಿರುವ ವರದಿ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

20. ನಗರ ಯೋಜನೆ ಮತ್ತು ಆಡಳಿತದಲ್ಲಿ ಸಂಶೋಧನೆ ಮತ್ತು ಸಾಮರ್ಥ್ಯ ನಿರ್ಮಾಣವನ್ನು ಉತ್ತೇಜಿಸುವುದು.